# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 171 |
| ಸದಸ್ಯರ ಹೆಸರು | ಶ್ರೀ ಎಂ. ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 14.12.2021. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಟ್ಟಾ ಭೂಮಿ, ಹಳ್ಳ, ತೊರೆ, ಕೆರೆ, ನದಿ, ಪ್ರದೇಶಗಳಲ್ಲಿ ಮರಳು ತೆಗೆಯಲು ಅವಕಾಶ ನೀಡುವ ಕರ್ನಾಟಕ ನೂತನ ಮರಳು ನೀತಿ, 2020 ಜಾರಿಯಲ್ಲಿದೆಯೇ; ಹಾಗಿದ್ದಲ್ಲಿ, ನೂತನ ಮರಳು ನೀತಿ ಜಾರಿಗೆ ತಂದಿರುವ ಉದ್ದೇಶಗಳೇನು; (ವಿವರ ನೀಡುವುದು) | ಜಾರಿಯಲ್ಲಿರುತ್ತದೆ.<br>ಹೊಸ ಮರಳು ನೀತಿ, 2020ನ್ನು ರಾಜ್ಯದ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಸುಲಭವಾಗಿ ಕಡಿಮೆ ದರದಲ್ಲಿ ಮರಳು ಪೂರೈಕೆ ಮಾಡುವ ಸಂಬಂಧ ಜಾರಿಗೊಳಿಸಲಾಗಿರುತ್ತದೆ. |
| ಆ) | ಈ ಹೊಸ ಮರಳು ನೀತಿಯಡಿ ಹಾಸನ ಜಿಲ್ಲೆಯಲ್ಲಿ ಮರಳು ತೆಗೆಯಲು ಗುರುತಿಸಿರುವ ಮರಳು ನಿಕ್ಷೇಪಗಳು ಯಾವುವು; ಈ ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳಿನ ಪ್ರಮಾಣವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | I, II ಮತ್ತು III ನೇ ಶ್ರೇಣಿಯ ಹಳ್ಳ / ತೊರೆ ಮತ್ತು ಕೆರೆಗಳಲ್ಲಿ ಒಟ್ಟು 14 ಮರಳು ನಿಕ್ಷೇಪ ಪ್ರದೇಶಗಳನ್ನು ಗುರುತಿಸಿದ್ದು, ಸಂಬಂಧಪಟ್ಟ ಗ್ರಾಮ ಪಂಚಾಯತಿಗಳ ಮೂಲಕ ವಿಲೇಪಡಿಸಲು ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>IV, V ಮತ್ತು VI ನೇ ಶ್ರೇಣಿಯ ಹೊಳೆ / ನದಿಗಳಲ್ಲಿ ಒಟ್ಟು 05 ಮರಳು ಬ್ಲಾಕ್ ಗಳನ್ನು ಗುರುತಿಸಿದ್ದು, ವಿಲೇಪಡಿಸಲು ಮೆ\|\| ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಷನ್ ಲಿ. ಇವರಿಗೆ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>ವಿವರಗಳನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ |
| ಇ) | ಈ ಮರಳು ನೀತಿಯಿಂದ ರಾಜ್ಯ ಸರ್ಕಾರಕ್ಕೆ ಪ್ರಸಕ್ತ ಸಾಲಿನಲ್ಲಿ ಸಂದಾಯವಾಗಿರುವ ಆದಾಯವೆಷ್ಟು;<br>ಈ ನೀತಿಯಡಿ ಪ್ರತಿ ಮೆಟ್ರಿಕ್ ಟನ್ ಮರಳಿಗೆ ನಿಗದಿಪಡಿಸಿರುವ ದರವೆಷ್ಟು; ದರ ನಿಗದಿಪಡಿಸಲು ಅನುಸರಿಸುವ ಮಾನದಂಡಗಳೇನು; (ವಿವರ ನೀಡುವುದು) | ಪ್ರಸ್ತುತ, ಹೊಸ ಮರಳು ನೀತಿ, 2020 ಜಾರಿಯಲ್ಲಿದ್ದು, ಸದರಿ ಮರಳು ನೀತಿಯಂತೆ ದಿನಾಂಕ 01.12.2021 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು 2021 ನ್ನು ಜಾರಿಗೊಳಿಸಲಾಗಿರುತ್ತದೆ.<br>ಅಧಿಸೂಚನೆ ಹೊರಡಿಸಿರುವ ಮರಳು ನಿಕ್ಷೇಪ ಪ್ರದೇಶ / ಬ್ಲಾಕ್ ಗಳಲ್ಲಿ ಮರಳು ತೆಗೆಯುವ ಕಾರ್ಯ ಪ್ರಾರಂಭವಾಗಬೇಕಾಗಿರುತ್ತದೆ. |

| | | |
|---|---|---|
| | | • I, II ಮತ್ತು III ನೇ ಶ್ರೇಣಿಯ ಹಳ್ಳ / ತೊರೆ ಮತ್ತು ಕೆರೆಗಳಲ್ಲಿ ಮರಳು ತೆಗೆದು ಗ್ರಾಮ ಪಂಚಾಯಿತಿಗಳ ಮೂಲಕ ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ರೂ. 300/- ಗಳನ್ನು ನಿಗದಿಪಡಿಸಲಾಗಿರುತ್ತದೆ.<br><br>• IV, V ಮತ್ತು VI ನೇ ಶ್ರೇಣಿಯ ಹೊಳೆ / ನದಿಗಳಲ್ಲಿ ಲಭ್ಯವಿರುವ ಮರಳನ್ನು ಮತ್ತು ಅಣೆಕಟ್ಟು / ಜಲಾಶಯ / ಬ್ಯಾರೇಜ್‌ಗಳು ಮತ್ತು ಸದರಿ ಹಿನ್ನೀರಿನ ಪ್ರದೇಶಗಳಲ್ಲಿ ಹೂಳು ತೆಗೆಯುವ ಮುಖಾಂತರ ದೊರೆತ ಮರಳನ್ನು ಸರ್ಕಾರದ ಆದೇಶ ಸಂಖ್ಯೆ ಸಿಐ 344 ಎಂಎಂಎನ್ 2019, ದಿನಾಂಕ 18.05.2020 ರಂತೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಮೆ\|\| ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಷನ್ ಲಿ., ಮತ್ತು ಮೆ\|\| ಹಟ್ಟಿ ಚಿನ್ನದ ಗಣಿ ನಿಯಮಿತ ಇವರಿಗೆ ವಹಿಸಲಾಗಿರುತ್ತದೆ.<br><br>• ಸದರಿ ಸಂಸ್ಥೆಗಳಿಂದ ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ರೂ. 700/- ಗಳನ್ನು ನಿಗದಿಪಡಿಸಲಾಗಿರುತ್ತದೆ.<br><br>ಹೊಸ ಮರಳು ನೀತಿಯಡಿ ಪ್ರತಿ ಮೆಟ್ರಿಕ್ ಟನ್ ಮರಳಿಗೆ ದರ ನಿಗದಿಪಡಿಸುವ ಸಂಬಂಧ ವಿಸ್ತೃತವಾಗಿ ಚರ್ಚೆ ನಡೆಸಿದ್ದು, ಮರಳು ಗಣಿಗಾರಿಕೆಯಿಂದ ಸರ್ಕಾರಕ್ಕೆ ಬರಬೇಕಾದ ರಾಜಧನ, ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ಸಂಗ್ರಹಣೆಗೆ ತಗಲುಬಹುದಾದ ವೆಚ್ಚ, ಸ್ಟಾಕ್ ಯಾರ್ಡ್ ನಿರ್ವಹಣೆ ವೆಚ್ಚ, ಗಣಿಗಾರಿಕೆ ನಿರ್ವಹಿಸುವ ಸಂಸ್ಥೆಗಳ ಲಾಭಾಂಶ ಹಾಗೂ ಇತರೆ ಎಲ್ಲಾ ಖರ್ಚು ವೆಚ್ಚಗಳನ್ನು ಪರಿಗಣಿಸಿ ಮೇಲ್ಕಂಡ ದರವನ್ನು ನಿಗದಿಪಡಿಸಲಾಗಿರುತ್ತದೆ. |
| ಈ) | ಈ ನೀತಿಯಡಿ ಸ್ಥಳೀಯವಾಗಿ ಜನತೆಯು ಯಾವ ಯಾವ ಕಾಮಗಾರಿಗಳಿಗೆ ಮರಳನ್ನು ಖರೀದಿಸಲು ಅನುಮತಿ ನೀಡಲಾಗಿದೆ; ಅನುಮತಿಯನ್ನು ಪಡೆಯಲು ಅನುಸರಿಸಬಹುದಾದ ಕ್ರಮಗಳೇನು?<br>(ವಿವರ ನೀಡುವುದು) | • ಹೊಸ ಮರಳು ನೀತಿ, 2020 ರಡಿ I, II & III ನೇ ಶ್ರೇಣಿಯ ಹಳ್ಳ / ತೊರೆಗಳಲ್ಲಿ ಹಾಗೂ ಕೆರೆಗಳು ಲಭ್ಯವಿರುವ ಮರಳನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ತಾಲ್ಲೂಕಿನ ಸ್ಥಳೀಯ ಯಾವುದೇ ಸಾರ್ವಜನಿಕ, ಸರ್ಕಾರಿ, ಸರ್ಕಾರಿ ಪ್ರಾಯೋಜಿತ ಕಡಿಮೆ ವರಮಾನದ ವಸತಿ ಯೋಜನೆ ಮನೆಗಳಿಗೆ ಮತ್ತು ಸಮುದಾಯತ್ವ ನಿರ್ಮಾಣ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. |

--3

| | | |
|---|---|---|
| | | • IV V & VI ನೇ ಶ್ರೇಣಿಯ ಹೊಳೆ / ನದಿಗಳಲ್ಲಿ ಮತ್ತು ಅಣೆಕಟ್ಟು / ಜಲಾಶಯ / ಬ್ಯಾರೇಜ್ ಹಾಗೂ ಅಣೆಕಟ್ಟಿನ ಹಿನ್ನೀರಿನ ಪ್ರದೇಶದಲ್ಲಿ ಮರಳು ತೆಗೆದು ಮಾರಾಟ ಮಾಡಲು ಮೆ\|\| ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ (KSMCL) ಮತ್ತು ಮೆ\|\| ಹಟ್ಟಿ ಚಿನ್ನದ ಗಣಿ ಕಂಪನಿ (HGML) ನಿಯಮಿತ ಇವರಿಗೆ ವಹಿಸಲಾಗಿದ್ದು, ಸದರಿ ಸಂಸ್ಥೆಗಳಿಂದ ಮರಳನ್ನು ಆನ್ ಲೈನ್ ಬುಕಿಂಗ್ ಮೂಲಕ ಯಾವುದೇ ಸಾರ್ವಜನಿಕ ಹಾಗೂ ಸರ್ಕಾರಿ ನಿರ್ಮಾಣ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br><br>ಮೇಲ್ಕಂಡ ಸಂಸ್ಥೆಗಳಿಂದ ಮರಳು ಪಡೆಯಲು ಅನುಸರಿಸಬೇಕಾದ ಬೇಕಾದ ಕ್ರಮಗಳ ಕುರಿತು ಸರ್ಕಾರವು ದಿನಾಂಕ 05.05.2020 ರಂದು ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.<br><br>ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

ಸಂಖ್ಯೆ ಸಿಐ 597 ಎಂಎಂಎನ್ 2021

Halappa DA

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

ಅನುಬಂಧ-1

## ಹಾಸನ ಜಿಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ I, II & III ನೇ ಶ್ರೇಣಿಯ ಹಳ್ಳಗಳಲ್ಲಿ / ತೊರೆಗಳಲ್ಲಿ ಗುರುತಿಸಿರುವ ಮರಳು ಪ್ರದೇಶಗಳ ವಿವರಗಳು

| ಕ್ರ ಸಂ. | ತಾಲ್ಲೂಕು | ಗ್ರಾಮ ಪಂಚಾಯಿತಿ | ಗ್ರಾಮ | ಹಳ್ಳದ ಪಾತ್ರದ ಪಕ್ಕದ ಸರ್ವೇ ನಂ. | ವಿಸ್ತೀರ್ಣ (ಎಕರೆಗಳಲ್ಲಿ) | ಲಭ್ಯವಿರುವ ಮರಳಿನ ಪ್ರಮಾಣ (ಮೆ.ಟನ್ ಗಳಲ್ಲಿ) |
|---|---|---|---|---|---|---|
| 1 | ಬೇಲೂರು | ಚಿಕ್ಕಮೇದೂರು | ಮರೂರು | 5, 6 | 0.35 | 600 |
| 2 | | | | 5, 96 | 0.35 | 600 |
| 3 | | ದಬ್ಬೆ | ಕಿತೂರು | 37, 36 | 1.00 | 500 |
| 4 | | | ಕರ್ಕಿಹಳ್ಳಿ | 68 | 1.10 | 600 |
| 5 | | ಕೋಗಿಲೆಮನೆ | ರಣಘಟ್ಟ | 94, 95, 96, 97, 98, 99 | 2.20 | 1200 |
| 6 | | | | 2, 100, 101 | 1.25 | 600 |
| 7 | | | | 2 (ರಣಘಟ್ಟ) 139 (ಹಾದಲಗೆರೆ) | 2.00 | 700 |
| 8 | | ಮದಘಟ್ಟ | ಜಿನಗನಹಳ್ಳಿ | 1, 2, 3, 4, 5, 36 | 1.30 | 600 |
| 9 | | ಇಬ್ಬೀಡು | ಸೂರಾಪುರ | 32 & 33 | 3.30 | 1500 |
| 10 | ಸಕಲೇಶಪುರ | ಯಸಳೂರು | ಹುಲಗತ್ತೂರು | 35 | 1.08 | 1350 |
| 11 | | | | 35 & 20 | 1.13 | 1500 |
| 12 | | ಉಚ್ಚಂಗಿ | ಕೊತ್ತನಹಳ್ಳಿ | 60 | 1.13 | 1500 |
| 13 | | | | 60 | 1.34 | 1550 |
| 14 | | | | 60, 61, 56, 64, 4, 5 | 1.13 | 1500 |

04.12.2014

ಡಾ:ಸಿ.ವಿ. ರಾಮನ್
ಜಂಟಿ ನಿರ್ದೇಶಕರು (ಖನಿಜ),
ಗಣಿ ಮತ್ತು ಭೂವಿಜ್ಞಾನ ಇಲಾಖೆ,
[illegible] "ಖನಿಜ ಭವನ", ಬೆಂಗಳೂರು-01

ಅನುಬಂಧ-1

**ಹಾಸನ ಜಿಲ್ಲಾ ವ್ಯಾಪ್ತಿಯ ಸಕಲೇಶಪುರ ತಾಲ್ಲೂಕಿನ IV, V & VI ನೇ ಶ್ರೇಣಿಯ ಹೊಳೆ/ ನದಿಗಳಲ್ಲಿ ಮತ್ತು ಅಣೆಕಟ್ಟು / ಜಲಾಶಯ / ಬ್ಯಾರೇಜ್ ಗಳಲ್ಲಿ HGML & KSMCL ರವರಿಗೆ ಗುರುತಿಸಿ ಅಧಿಸೂಚನೆ ಹೊರಡಿಸಿರುವ ಮರಳು ಬ್ಲಾಕ್‌ಗಳ ವಿವರಗಳು**

| ಕ್ರ ಸಂ. | ನದಿ ಪಾತ್ರದ ಹೆಸರು | ಗ್ರಾಮ | ಸರ್ವೇ ನಂ. | ಗುರುತಿಸಿರುವ ಮರಳು ಬ್ಲಾಕ್‌ನ ವಿಸ್ತೀರ್ಣ (ಎಕರೆಗಳಲ್ಲಿ) | ಗುರುತಿಸಿರುವ ಮರಳು ಬ್ಲಾಕ್‌ಗಳಲ್ಲಿರುವ ಅಂದಾಜು ಮರಳಿನ ಪ್ರಮಾಣ (ಮೆ.ಟನ್ ಗಳಲ್ಲಿ) |
|---|---|---|---|---|---|
| 1 | ಬಿಳಾಹ ಹಳ್ಳ | ಯಸಳೂರು-1 | 84, 82, 81, 79, 78, 76, 36, 37, 38, 39 | 6.00 | 10472 |
| 2 | ಬಿಳಾಹ ಹಳ್ಳ | ಯಸಳೂರು-2 | 85, 87, 88, 89, 102, 105, 106 | 6.20 | 11344 |
| 3 | ಕರಗೂರು ಹಳ್ಳ | ಕರಗೂರು-1 | 17, 32, 31, 30, 100 | 5.00 | 8726 |
| 4 | ಕರಗೂರು ಹಳ್ಳ | ಕರಗೂರು-2 | 19, 15, 14, 6, 7, 8, 9 | 6.00 | 10472 |
| 5 | ಪಾಲಹಳ್ಳಿ ಹಳ್ಳ | ಪಾಲಹಳ್ಳಿ | 26, 33, 50, 10, 11, 12 | 6.00 | 10472 |

C.I-NO-597-MMN-2021.

04:12:2021

ಡಾ:ಸಿ.ವಿ. ರಾಮನ್
ಜಂಟಿ ನಿರ್ದೇಶಕರು (ಖನಿಜ),
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ನಂ.49, "ಖನಿಜ ಭವನ", ಬೆಂಗಳೂರು-01

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ -೧೫೫<br>Volume - 155 | ಬೆಂಗಳೂರು, ಗುರುವಾರ, ೨೧, ಮೇ, ೨೦೨೦ (ವೈಶಾಖ, ೩೧, ಶಕವರ್ಷ ೧೯೪೨)<br>Bengaluru, THURSDAY, 21, MAY, 2020 (Vaishakha 31, ShakaVarsha 1942) | ಸಂಚಿಕೆ ೨೧<br>Issue 21 |
|---|---|---|


## ಭಾಗ ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

### ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಕರ್ನಾಟಕ ಹೊಸ ಮರಳು ನೀತಿ, 2020 ನ್ನು ಜಾರಿಗೊಳಿಸುವ ಕುರಿತು.**

********

ಪ್ರಸ್ತಾವನೆ:

ರಾಜ್ಯ ಮರಳು ನೀತಿ 2011 ರಂತೆ, ರಾಜ್ಯದಲ್ಲಿ ಮರಳು ಗಣಿಗಾರಿಕೆಯ ಜವಾಬ್ದಾರಿಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿತ್ತು. ಸಂಬಂಧಿಸಿದ ತಾಲ್ಲೂಕು ಮರಳು ಸಮಿತಿಯಿಂದ ನದಿ ಪಾತ್ರಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಗುರುತಿಸಿ, ಜಿಲ್ಲಾ ಮರಳು ಸಮಿತಿಯ ಅನುಮೋದನೆ ನೀಡಿದ ನಂತರ ಲೋಕೋಪಯೋಗಿ ಇಲಾಖೆಯಿಂದ ಮರಳು ಗಣಿಗಾರಿಕೆಯನ್ನು ನಿರ್ವಹಿಸಲಾಗುತ್ತಿತ್ತು. ಸದರಿ ಮರಳು ಬ್ಲಾಕ್‌ಗಳಲ್ಲಿ ತೆಗೆದ ಮರಳನ್ನು ದಾಸ್ತಾನು ಪ್ರಾಂಗಣದಲ್ಲಿ ಸಂಗ್ರಹಿಸಿ, ನೇರವಾಗಿ ಸಾರ್ವಜನಿಕರಿಗೆ ಸಾಗಾಣಿಕೆ ಪರವಾನಿಗೆ ಮೂಲಕ ಮರಳನ್ನು ವಿತರಿಸಲಾಗುತ್ತಿತ್ತು.

ಅಕ್ರಮ ಮರಳು ಗಣಿಗಾರಿಕೆ ಸಂಬಂಧ ಅಂದಿನ ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ॥ ರಫೀಕ್ ಅಹ್ಮದ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ವಿಧಾನ ಸಭಾ ಸದಸ್ಯರ ಅಧ್ಯಯನ ಸಮಿತಿ ಶಿಫಾರಸ್ಸಿನಂತೆ, ಸರ್ಕಾರವು ದಿನಾಂಕ 12.08.2016 ರಂದು ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿಗಳು, 2016 ನ್ನು ಜಾರಿಗೆ ತರಲಾಯಿತು. ಸದರಿ ನಿಯಾಮಾವಳಿಗಳಲ್ಲಿ ಮರಳು ಗಣಿಗಾರಿಕೆ ಸಂಬಂಧ ಪ್ರತ್ಯೇಕ ಅಧ್ಯಾಯ IV-B ನ್ನು ಅಳವಡಿಸಿಕೊಳ್ಳಲಾಯಿತು.

ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿಗಳು, 2016 ರನ್ವಯ, ನದಿ ಪಾತ್ರದ ಮರಳು ನಿಕ್ಷೇಪಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ ಮೂಲಕ ಟೆಂಡರ್ ಕಂ-ಹರಾಜು ಮೂಲಕ

ಯಶಸ್ವಿ ಬಿಡ್ ದಾರರಿಗೆ ಗುತ್ತಿಗೆ ಮಂಜೂರು ಮಾಡಲು ಮತ್ತು ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಲೈಸನ್ಸ್ ನೀಡಲು ಸಹ ಅವಕಾಶ ಕಲ್ಪಿಸಲಾಗಿರುತ್ತದೆ.

ಕರ್ನಾಟಕ ರಾಜ್ಯವು ರಾಷ್ಟ್ರದಲ್ಲಿಯೇ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಜ್ಯಗಳಲ್ಲಿ ಒಂದಾಗಿರುತ್ತದೆ. ಸರ್ಕಾರದಿಂದ ನಿರ್ವಹಿಸುವ ನಿರ್ಮಾಣ ಕಾಮಗಾರಿಗಳು ಮತ್ತು ಇತರೇ ಸಾರ್ವಜನಿಕ ನಿರ್ಮಾಣ ಕಾಮಗಾರಿಗಳಿಗೆ ಹೆಚ್ಚಿನ ಮರಳಿನ ಬೇಡಿಕೆ ಇರುತ್ತದೆ. ಪ್ರಸ್ತುತ ರಾಜ್ಯದಲ್ಲಿ ಅಂದಾಜು 45 ದಶಲಕ್ಷ ಮೆಟ್ರಿಕ್ ಟನ್ ಪ್ರಮಾಣದ ಮರಳಿನ ಬೇಡಿಕೆ ಇರುತ್ತದೆ. ಈ ಪ್ರಮಾಣದಲ್ಲಿ 30 ದಶಲಕ್ಷ ಮೆಟ್ರಿಕ್ ಟನ್ ಮರಳನ್ನು ಎಂ-ಸ್ಯಾಂಡ್ ಘಟಕಗಳಿಂದ, ನದಿ ಪಾತ್ರಗಳಲ್ಲಿ ಟೆಂಡರ್ ಕಂ ಇ-ಹರಾಜು ಮೂಲಕ ಗುತ್ತಿಗೆ ಮಂಜೂರಾದ ಮರಳು ಬ್ಲಾಕ್‌ಗಳು ಮತ್ತು ಪಟ್ಟಾ ಜಮೀನುಗಳಲ್ಲಿ ಮಂಜೂರಾದ ಮರಳು ಗಣಿಗಾರಿಕೆ ಲೈಸನ್ಸ್ ಪ್ರದೇಶಗಳಿಂದ ಒಟ್ಟು 4.5 ದಶಲಕ್ಷ ಮೆಟ್ರಿಕ್ ಟನ್ ಮರಳು ಉತ್ಪಾದನೆಯಾಗಿದ್ದು, ಸರ್ಕಾರಿ ಹಾಗೂ ಸಾರ್ವಜನಿಕ ನಿರ್ಮಾಣ ಕಾಮಗಾರಿಗಳಿಗೆ ಪೂರೈಸಲಾಗುತ್ತಿರುತ್ತದೆ.

ಮುಂದುವರೆದು, ಹೊರರಾಜ್ಯಗಳಿಂದ ಅಂದಾಜು 2 ದಶಲಕ್ಷ ಮೆಟ್ರಿಕ್ ಟನ್ ಪ್ರಮಾಣದ ಎಂ-ಸ್ಯಾಂಡ್ ಮತ್ತು ನದಿ ಮರಳು ರಾಜ್ಯದ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಕೆಯಾಗುತ್ತಿದೆ. ಮರಳಿನ ಬೇಡಿಕೆ ಮತ್ತು ಸರಬರಾಜಿಗೆ ಸುಮಾರು 8.5 ದಶಲಕ್ಷ ಮೆಟ್ರಿಕ್ ಟನ್ ಕೊರತೆ ಇರುವುದು ಕಂಡು ಬಂದಿರುತ್ತದೆ. ಕೊರತೆ ಇರುವ 8.5 ದಶಲಕ್ಷ ಮೆಟ್ರಿಕ್ ಟನ್ ಮರಳಿನ ಬೇಡಿಕೆಯನ್ನು ಪೂರೈಸಲು ರಾಜ್ಯ ಸರ್ಕಾರವು ದಿನಾಂಕ 16.11.2017 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ, 2017 ನ್ನು ಜಾರಿಗೆ ತಂದು, ವಿದೇಶಗಳಿಂದ ಮರಳನ್ನು ಆಮದು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ಪ್ರಸ್ತುತ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಸಾರ್ವಜನಿಕರಿಗೆ ಟೆಂಡರ್ ಕಂ ಹರಾಜು ಮೂಲಕ ಮರಳು ಗುತ್ತಿಗೆ ಮಂಜೂರು ಮಾಡಲಾಗುತ್ತಿದ್ದು, ಈ ಪದ್ಧತಿಯಲ್ಲಿ ಮರಳಿನ ಮಾರಾಟದ ದರದ ಮೇಲೆ ನಿಯಂತ್ರಣವಿಲ್ಲದ ಕಾರಣ ಸಾರ್ವಜನಿಕರಿಗೆ ಅಧಿಕ ಬೆಲೆಯಲ್ಲಿ ಮರಳು ಮಾರಾಟವಾಗುತ್ತಿದೆ. ಇದರಿಂದಾಗಿ ಜನ ಸಾಮಾನ್ಯರಿಗೆ ಹೆಚ್ಚಿನ ಬೆಲೆಯಲ್ಲಿ ಮರಳು ಖರೀದಿಸುವುದು ಕಷ್ಟಕರವಾಗಿರುತ್ತದೆ. ಅಲ್ಲದೆ ಕೆಲವು ಜಿಲ್ಲೆಗಳಲ್ಲಿ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಬಿಡ್ಡುದಾರರುಗಳು ಅತೀ ಹೆಚ್ಚಿನ ಮೊತ್ತಕ್ಕೆ ಬಿಡ್ಡು ಮಾಡಿ ಮರಳು ಬ್ಲಾಕ್ ಗಳಿಗೆ ಗುತ್ತಿಗೆ ಪಡೆಯದೆ ಇದ್ದುದ್ದರಿಂದ ಮರಳು ಬ್ಲಾಕ್ ಗಳಲ್ಲಿ ಮರಳು ವಿಲೇವಾರಿಯಾಗದೆ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುತ್ತದೆ. ಮುಂದುವರೆದು, ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ನೋಂದಾಯಿತ ಮರಳು ಆಮದುದಾರರಿಗೆ ಸಾಗಾಣಿಕೆಯಲ್ಲಿನ ಹೆಚ್ಚಿನ ವೆಚ್ಚದಿಂದಾಗಿ ಸಮರ್ಪಕವಾಗಿ ಮರಳು ಪೂರೈಕೆಯಾಗಿರುವುದಿಲ್ಲ. ಇಷ್ಟೆಲ್ಲಾ ಪ್ರಯತ್ನಗಳ ನಂತರವೂ ನಿರ್ಮಾಣ ಕಾಮಾಗಾರಿಗಳಿಗೆ ನಿಗದಿತ ಸಮಯದಲ್ಲಿ ಮತ್ತು ನಿಯಮಿತವಾಗಿ ಮರಳು ಪೂರೈಕೆಯಾಗದೇ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುತ್ತದೆ.

ಆದುದರಿಂದ, ದಿನಾಂಕ 20.09.2018 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ, ಮರಳು ನೀತಿ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ದಿನಾಂಕ 03.11.2018 ರಂದು ಸಚಿವ

ಸಂಪುಟ ಉಪ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಚಿವ ಸಂಪುಟ ಉಪ ಸಮಿತಿಯ ಶಿಫಾರಸ್ಸುಗಳ ಹಿನ್ನಲೆಯಲ್ಲಿ ದಿನಾಂಕ 13.12.2019 ಮತ್ತು 11.02.2020 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ, ರಾಜ್ಯದಲ್ಲಿನ ನಿರ್ಮಾಣ ಕಾಮಗಾರಿಗಳಿಗೆ ಕೈಗೆಟುಕುವ ದರದಲ್ಲಿ ಮತ್ತು ನಿಯಮಿತವಾಗಿ ಮರಳು ದೊರಕುವಂತೆ ಮಾಡಲು ರಾಜ್ಯದಲ್ಲಿ ಹೊಸ ಮರಳು ನೀತಿಯನ್ನು ಜಾರಿಗೆ ತರುವಂತೆ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 27.02.2020 ಮತ್ತು 05.03.2020 ರಂದು ಸಂಬಂಧಿಸಿದ ಇಲಾಖೆ ಅಧಿಕಾರಿಗಳೊಂದಿಗೆ ಜರುಗಿದ ಸಭೆಗಳ ನಡವಳಿಯಂತೆ ಕರಡು ಮರಳು ನೀತಿಯ ರೂಪುರೇಷೆಗಳ ಬಗ್ಗೆ ತೀರ್ಮಾನಿಸಲಾಗಿರುತ್ತದೆ.

ಸಚಿವ ಸಂಪುಟ ಉಪ ಸಮಿತಿಯ ಶಿಫಾರಸ್ಸುಗಳನ್ವಯ ಮತ್ತು ದಿನಾಂಕ 13.12.2019 ಮತ್ತು ದಿನಾಂಕ 11.02.2020 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತಿಳಿಸಿದಂತೆ, ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 27.02.2020 ಮತ್ತು 05.03.2020 ರಂದು ಸಂಬಂಧಿಸಿದ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಪರಿಶೀಲಿಸಿ, ರಾಜ್ಯದಲ್ಲಿ ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಮತ್ತು ಪಾರದರ್ಶಕವಾಗಿ ಮರಳು ದೊರೆಯುವಂತೆ ಮಾಡುವ ಉದ್ದೇಶದಿಂದ ಹೊಸ ಮರಳು ನೀತಿ, 2020ನ್ನು ದಿನಾಂಕ 30.04.2020 ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ, ಪ್ರಸ್ತಾವನೆಗೆ ಅನುಮೋದನೆ ಪಡೆಯಲಾಗಿರುತ್ತದೆ.

ದಿನಾಂಕ 30.04.2020 ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿತವಾದ ಮರಳು ನೀತಿ, 2020ನ್ನು ರಾಜ್ಯದಲ್ಲಿ ಜಾರಿಗೊಳಿಸಲು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:** ಸಿಐ 344 ಎಂಎಂಎನ್ 2019, ಬೆಂಗಳೂರು, ದಿನಾಂಕ 05.05.2020.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಈ ಆದೇಶದೊಂದಿಗೆ ಲಗತ್ತಿಸಿರುವ ಕರ್ನಾಟಕ ಮರಳು ನೀತಿ, 2020ನ್ನು ಅನುಬಂಧ-I ರಂತೆ ಹಾಗೂ ಮರಳು ನೀತಿ, 2020ರ ಅನುಷ್ಠಾನಕ್ಕಾಗಿ ವಿವರವಾದ ಮಾರ್ಗಸೂಚಿಗಳನ್ನು ಅನುಬಂಧ-II ರಂತೆ ತಕ್ಷಣದಿಂದ ಅನ್ವಯವಾಗುವಂತೆ ಜಾರಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಿವಪ್ರಕಾಶ್.)
ಪೀಠಾಧಿಕಾರಿ (ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

<u>ಆದೇಶ ಸಂಖ್ಯೆ ಸಿಐ 344 ಎಂಎಂಎನ್ 2019, ಬೆಂಗಳೂರು ದಿನಾಂಕ 05.05.2020.</u>

<u>ಅನುಬಂಧ–I</u>

ಹೊಸ ಮರಳು ನೀತಿ, 2020

ರಾಜ್ಯದ ಭೌಗೋಳಿಕ, ಭೂವೈಜ್ಞಾನಿಕ ಮತ್ತು ಆಡಳಿತಾತ್ಮಕ ಹಿನ್ನೆಲೆಯನ್ನು ಪರಿಗಣಿಸಿ, ಸರ್ಕಾರಿ ಮತ್ತು ಸಾರ್ವಜನಿಕ ನಿರ್ಮಾಣ ಕಾಮಗಾರಿಗಳಿಗೆ ನಿಯಮಿತವಾಗಿ ಮತ್ತು ಸುಲಭವಾಗಿ ಕೈಗೆಟಕುವ ದರದಲ್ಲಿ ಮರಳು ದೊರೆಯುವಂತೆ ಮತ್ತು ಪರಿಸರಕ್ಕೆ ಧಕ್ಕೆಯಾಗದಂತೆ ವೈಜ್ಞಾನಿಕವಾಗಿ ಮರಳು ಗಣಿಗಾರಿಕೆಗೆ ಅವಕಾಶ ಕಲ್ಪಿಸಲು ಈ ಕೆಳಕಂಡ ಹೊಸ ಮರಳು ನೀತಿ, 2020ನ್ನು ಪ್ರಸ್ತಾಪಿಸಿದೆ.

I. ಮರಳು ನಿಕ್ಷೇಪಗಳ ಗುರುತಿಸುವಿಕೆ:

1. **ಮೊದಲನೇ, ಎರಡನೇ ಮತ್ತು ಮೂರನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ (I, II & III Order Streams) ಮತ್ತು ಕೆರೆಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಗುರುತಿಸುವಿಕೆ:**

   ಮೊದಲನೇ, ಎರಡನೇ ಮತ್ತು ಮೂರನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ (I, II & III Order Streams) ಮತ್ತು ಕೆರೆಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಅಂತರ್ಜಲ ಇಲಾಖೆ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ತಂಡದಿಂದ ಗುರುತಿಸುವುದು.

2. **IV, V & VI ನೇ ಕ್ರಮಾಂಕದ ಹೊಳೆ /ನದಿಗಳು ಹಾಗೂ ಅಣೆಕಟ್ಟು ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದಲ್ಲಿನ ಮರಳು ನಿಕ್ಷೇಪಗಳ ಗುರುತಿಸುವಿಕೆ:**

   IV, V & VI ನೇ ಕ್ರಮಾಂಕದ ತೊರೆಗಳು /ನದಿಗಳು ಹಾಗೂ ಅಣೆಕಟ್ಟು/ಜಲಾಶಯ ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದಲ್ಲಿನ ಮರಳು ನಿಕ್ಷೇಪಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಜಲಸಂಪನ್ಮೂಲ ಇಲಾಖೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಗುರುತಿಸುವುದು ಮತ್ತು ಮರಳು ನಿಕ್ಷೇಪಗಳು ಅರಣ್ಯ ವ್ಯಾಪ್ತಿಯಲ್ಲಿದ್ದಲ್ಲಿ ಸಂಬಂಧಿಸಿದ ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿಯಾಗಿ ಪರಿಶೀಲನೆ ನಡೆಸಿ, ಸದರಿ ಪ್ರದೇಶದಲ್ಲಿ ಸಂಗ್ರಹವಾಗಿರುವ ಮರಳಿನ ಪ್ರಮಾಣವನ್ನು ಅಂದಾಜಿಸುವುದು.

II. ಮೇಲ್ವಿಚಾರಣೆ ಮತ್ತು ಅನುಮೋದನೆ:

ಅ. ಮೊದಲನೇ, ಎರಡನೇ ಮತ್ತು ಮೂರನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ (I, II &III Order Streams) ಮತ್ತು ಕೆರೆಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪದ ಪ್ರಮಾಣವನ್ನು ಜಂಟಿ ಸಮೀಕ್ಷೆ ತಂಡವು ಅಂದಾಜಿಸಿ ವರದಿಯನ್ನು ಅಕ್ಷಾಂಶ ಮತ್ತು ರೇಖಾಂಶಗಳುಳ್ಳ ನಕಾಶೆಯೊಂದಿಗೆ ಸೂಕ್ತ ಶಿಫಾರಸ್ಸಿನೊಂದಿಗೆ ಜಿಲ್ಲಾ ಮರಳು ಸಮಿತಿಯ ಅನುಮೋದನೆಗಾಗಿ ತಾಲ್ಲೂಕು ಮರಳು ಸಮಿತಿಯ ಮುಖಾಂತರ ಸಲ್ಲಿಸುವುದು.

ಆ. ಜಿಲ್ಲಾ ಮರಳು ಸಮಿತಿಯು ಮರಳು ನಿಕ್ಷೇಪ ಲಭ್ಯವಿರುವ ಪ್ರದೇಶವನ್ನು ಅಧಿಸೂಚಿಸಿದ ನಂತರ, ಅಧಿಸೂಚಿತ ಪ್ರದೇಶದಲ್ಲಿ ಮರಳು ನಿಕ್ಷೇಪದ ಪ್ರಮಾಣಕ್ಕೆ ಅನುಗುಣವಾಗಿ ಪರವಾನಿಗೆ ಅವಧಿಯನ್ನು ನಿಗದಿಪಡಿಸಿ, ಮಾನವ ಶ್ರಮದಿಂದ ಮರಳು ತೆಗೆಯಲು ಸಂಬಂಧಿಸಿದ ಗ್ರಾಮ ಪಂಚಾಯತ್ ಗೆ ಅನುಮತಿ ನೀಡತಕ್ಕದ್ದು.

ಇ. IV, V & VI ನೇ ಕ್ರಮಾಂಕದ ಹೊಳೆ /ನದಿಗಳು ಹಾಗೂ ಅಣೆಕಟ್ಟು/ಜಲಾಶಯ ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದಲ್ಲಿನ ಮರಳು ನಿಕ್ಷೇಪಗಳನ್ನು ಗುರುತಿಸಲು ರಚಿಸಿದ ಜಂಟಿ ಸಮೀಕ್ಷೆ ತಂಡವು ಸ್ಥಳ ಪರಿಶೀಲನೆ ವರದಿಯನ್ನು ಅಕ್ಷಾಂಶ ಮತ್ತು ರೇಖಾಂಶವುಳ್ಳ ನಕಾಶೆಯೊಂದಿಗೆ ಸೂಕ್ತ ಶಿಫಾರಸ್ಸಿನೊಂದಿಗೆ ಅನುಮೋದನೆಗಾಗಿ ಜಿಲ್ಲಾ ಮರಳು ಸಮಿತಿಗೆ, ತಾಲ್ಲೂಕು ಮರಳು ಸಮಿತಿಯ ಮೂಲಕ ಸಲ್ಲಿಸುವುದು.

ಈ. ಜಿಲ್ಲಾ ಮರಳು ಸಮಿತಿಯು ಮರಳು ನಿಕ್ಷೇಪ ಲಭ್ಯವಿರುವ ಪ್ರದೇಶವನ್ನು ಅಧಿಸೂಚಿಸಿದ ನಂತರ, ಅಧಿಸೂಚಿತ ಪ್ರದೇಶದಲ್ಲಿ ಮರಳು ತೆಗೆಯಲು ಸರ್ಕಾರವು ಅಧಿಸೂಚನೆ ಮೂಲಕ ನಿಗದಿಪಡಿಸಿದ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆ / ಕಾರ್ಪೋರೇಷನ್ / ನಿಗಮ / ಮಂಡಳಿಗಳಿಗೆ ಮರಳನ್ನು ತೆಗೆಯಲು ಪರವಾನಿಗೆ ನೀಡುವುದು.

III. ಮರಳು ಮಾರಾಟ ದರ ನಿಗದಿಪಡಿಸುವುದು:

ಅ. ಮೊದಲನೇ, ಎರಡನೇ ಮತ್ತು ಮೂರನೇ ಶ್ರೇಣಿಯ ಹಳ್ಳ / ತೊರೆಗಳಲ್ಲಿ (I, II & III Order Streams) ಮತ್ತು ಕೆರೆಗಳಲ್ಲಿ ಲಭ್ಯವಿರುವ ಮರಳನ್ನು ಜಿಲ್ಲಾ ಮರಳು ಸಮಿತಿಯು ನಿಗದಿಪಡಿಸಿದ ದರದಲ್ಲಿ ಗ್ರಾಮ ಪಂಚಾಯಿತಿ ಮೂಲಕ ಮರಳನ್ನು ಮಾರಾಟ ಮಾಡುವುದು. ಹೀಗೆ ಗ್ರಾಮ ಪಂಚಾಯತಿ ಮೂಲಕ ವಿಲೇವಾರಿ ಮಾಡುವ ಮರಳಿನ ದರದ ಗರಿಷ್ಠ ಮೊತ್ತವನ್ನು ನಿಗದಿಪಡಿಸುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

ಆ. IV, V & VI ನೇ ಕ್ರಮಾಂಕದ ಹೊಳೆ / ನದಿಗಳು ಹಾಗೂ ಅಣೆಕಟ್ಟು/ಜಲಾಶಯ ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದಲ್ಲಿ ಲಭ್ಯವಿರುವ ಮರಳನ್ನು ಜಿಲ್ಲಾ ಮರಳು ಸಮಿತಿಯು ನಿಗದಿಪಡಿಸುವ ಮಾರಾಟ ದರದಲ್ಲಿ ಮರಳನ್ನು ವಿಲೇವಾರಿ ಮಾಡುವುದು.

IV. ಗುತ್ತಿಗೆ/ಪರವಾನಿಗೆ ಅವಧಿ:

ಅ. ಜಿಲ್ಲಾ ಮರಳು ಸಮಿತಿಯು ಮೊದಲನೇ, ಎರಡನೇ ಮತ್ತು ಮೂರನೇ ಶ್ರೇಣಿಯ ಹಳ್ಳ / ತೊರೆಗಳಲ್ಲಿ (I, II & III Order Streams) ಮತ್ತು ಕೆರೆಗಳಲ್ಲಿ ಸಂಗ್ರಹವಾಗಿರುವ ಮರಳು ಲಭ್ಯತೆ ಆಧಾರದ ಮೇಲೆ ಮರಳು ತೆಗೆಯಲು ಪರವಾನಿಗೆ ಅವಧಿಯನ್ನು ನಿಗದಿಪಡಿಸುವುದು ಮತ್ತು ಸದರಿ ಪರವಾನಿಗೆ ಅವಧಿಯು ಗರಿಷ್ಠ ಒಂದು ವರ್ಷ ಮೀರತಕ್ಕದಲ್ಲ.

ಆ. IV, V & VI ನೇ ಕ್ರಮಾಂಕದ ಹೊಳೆ/ನದಿಗಳು ಹಾಗೂ ಅಣೆಕಟ್ಟು/ಜಲಾಶಯ ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದಲ್ಲಿ ಸಂಗ್ರಹವಾಗಿರುವ ಮರಳು ಲಭ್ಯತೆ ಆಧಾರದ ಮೇಲೆ ಮರಳು ತೆಗೆಯಲು ಪರವಾನಿಗೆ ಅವಧಿಯನ್ನು ನಿಗದಿಪಡಿಸುವುದು ಅಥವಾ ಗರಿಷ್ಠ ಐದು ವರ್ಷಗಳಿಗೆ ಅನುಮತಿ ನೀಡತಕ್ಕದ್ದು.

V. ಕ್ವಾರಿ ಯೋಜನೆ ಮತ್ತು ಪರಿಸರ ಅನುಮತಿ ಪತ್ರದ ಅಗತ್ಯತೆ:

ಮರಳು ತೆಗೆಯಲು ಪರವಾನಿಗೆ ಪಡೆದಂತಹ ಗ್ರಾಮ ಪಂಚಾಯತ್ ಗಳು ಮತ್ತು ಸರ್ಕಾರವು ಅಧಿಸೂಚನೆ ಮೂಲಕ ನಿಗದಿಪಡಿಸಿದ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆ / ಕಾರ್ಪೋರೇಷನ್/ ನಿಗಮ / ಮಂಡಳಿಗಳು MoEF ಮಾರ್ಗಸೂಚಿಗಳಂತೆ, I, II, III, IV, V & VI Order Streams ಹಾಗೂ ಅಣೆಕಟ್ಟು / ಜಲಾಶಯ ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದಲ್ಲಿ ಸಂಗ್ರಹವಾಗಿರುವ ಮರಳನ್ನು ತೆಗೆಯತಕ್ಕದ್ದು.

VI. ಮರಳು ವಿಲೇವಾರಿ:

ಅ. ಸಂಬಂಧಿಸಿದ ಗ್ರಾಮ ಪಂಚಾಯಿತಿ ಅಸ್ತಿತ್ವದಲ್ಲಿರುವ ತಾಲ್ಲೂಕಿನ ಸ್ಥಳೀಯ ಗ್ರಾಹಕರು ಸ್ವಂತ ಮನೆ ನಿರ್ಮಾಣ, ಶೌಚಾಲಯ ನಿರ್ಮಾಣ ಮತ್ತು ಸ್ಥಳೀಯ ಸಮುದಾಯಿತ್ವ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದ ಯೋಜನೆ ಹಾಗು ಇತರೆ ದಾಖಲಾತಿಗಳನ್ನು ಗ್ರಾಮ ಪಂಚಾಯತ್ ಗೆ ಸಲ್ಲಿಸಿ, ನಿಗದಿತ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿದ ನಂತರ, ಗ್ರಾಮ ಪಂಚಾಯಿತಿಯಿಂದ ಖನಿಜ ರವಾನೆ ಪರವಾನಿಗೆ ಪಡೆದು, I, II & III ನೇ ಕ್ರಮಾಂಕದ ಹಳ್ಳ / ತೊರೆ ಅಥವಾ ಕೆರೆಗಳಲ್ಲಿನ ಅಧಿಸೂಚಿತ ಮರಳು ನಿಕ್ಷೇಪ ಪ್ರದೇಶಗಳಲ್ಲಿ ಸ್ವಂತ ಖರ್ಚಿನಲ್ಲಿ ಮರಳನ್ನು ಲಘು ವಾಹನಗಳಲ್ಲಿ ಮೇಲ್ಕಂಡ ಕಾಮಾಗಾರಿಗಳಿಗೆ ಸಾಗಾಣಿಕೆ ಮಾಡಿಕೊಳ್ಳತಕ್ಕದ್ದು.

ಆ. ಗ್ರಾಮ ಪಂಚಾಯತಿಗಳು ಖನಿಜ ರವಾನೆ ಪರವಾನಿಗೆಗಳನ್ನು ಗ್ರಾಹಕರಿಗೆ ನೀಡುವ ಪ್ರಕ್ರಿಯೆಯನ್ನು ತಾಲ್ಲೂಕು ಮರಳು ಸಮಿತಿಯ ಮೇಲ್ವಿಚಾರಣೆಯಲ್ಲಿ ನಡೆಸತಕ್ಕದ್ದು.

ಇ. ಸರ್ಕಾರವು ಅಧಿಸೂಚನೆ ಮೂಲಕ ನಿಗದಿಪಡಿಸಿದ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆ / ಕಾರ್ಪೋರೇಷನ್/ ನಿಗಮ / ಮಂಡಳಿಗಳು, IV, V & VI ನೇ ಕ್ರಮಾಂಕದ ಹೊಳೆ / ನದಿಗಳು ಹಾಗೂ ಅಣೆಕಟ್ಟು / ಜಲಾಶಯ ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದಲ್ಲಿ ತೆಗೆದಂತಹ ಮರಳನ್ನು ಸ್ಟಾಕ್‌ಯಾರ್ಡ್‌ಗೆ ಸಾಗಾಣಿಕೆ ಮಾಡಿ ಮತ್ತು ಸ್ಟಾಕ್‌ಯಾರ್ಡ್ ನಲ್ಲಿರುವ ಮರಳನ್ನು ಖನಿಜ ರವಾನೆ ಪರವಾನಿಗೆಯೊಂದಿಗೆ ವಾಹನಗಳಿಗೆ ತುಂಬಿಸಿ, ಮರಳನ್ನು ಗ್ರಾಹಕರಿಗೆ ಮಾರಾಟ ಮಾಡತಕ್ಕದ್ದು.

ಈ. ಮರಳು ತೆಗೆದು, ಸಾಗಾಣಿಕೆ, ಸಂಗ್ರಹಣೆ ಮತ್ತು ಸಂಪೂರ್ಣ ವಿಲೇವಾರಿ ಜವಾಬ್ದಾರಿಯನ್ನು ಸರ್ಕಾರವು ಅಧಿಸೂಚನೆ ಮೂಲಕ ನಿಗದಿಪಡಿಸಿದ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆ / ಕಾರ್ಪೋರೇಷನ್/ ನಿಗಮ / ಮಂಡಳಿಗಳು ಪರವಾನಿಗೆ ಪಡೆದು ನಿರ್ವಹಿಸುವುದು.

**VII. ಮರಳು ಸಾಗಾಣಿಕೆ ವ್ಯವಸ್ಥೆ:**

ಅ. I, II & III ನೇ ಕ್ರಮಾಂಕದ ಹಳ್ಳ / ತೊರೆ, ಕೆರೆಗಳಲ್ಲಿನ ಅಧಿಸೂಚಿತ ಮರಳು ನಿಕ್ಷೇಪ ಪ್ರದೇಶಗಳಲ್ಲಿ ತೆಗೆದಂತಹ ಮರಳನ್ನು ಕಡಿಮೆ ಹೇರುಭಾರ ಸಾಮರ್ಥ್ಯದ ವಾಹನಗಳಾದ ಟ್ರ್ಯಾಕ್ಟರ್, ಎತ್ತಿನಗಾಡಿ ಇತ್ಯಾದಿ ಲಘು ವಾಹನಗಳಲ್ಲಿ ಹೇರುಭಾರ ಸಾಮರ್ಥ್ಯಕ್ಕೆ ಅನುಗುಣವಾಗಿ ತಾಲ್ಲೂಕು ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಮಾತ್ರ ಮರಳು ಸಾಗಾಣಿಕೆಗೆ ಅನುಮತಿ ನೀಡತಕ್ಕದ್ದು.

ಆ. IV, V & VI ನೇ ಕ್ರಮಾಂಕದ ಹೊಳೆ / ನದಿಗಳು ಹಾಗೂ ಅಣೆಕಟ್ಟು / ಜಲಾಶಯ ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದಲ್ಲಿ ತೆಗೆದಂತಹ ಮರಳನ್ನು ಸ್ಟಾಕ್‌ಯಾರ್ಡ್‌ಗೆ ಸಾಗಾಣಿಕೆ ಮಾಡಲು ಮತ್ತು ಸ್ಟಾಕ್‌ಯಾರ್ಡ್‌ನಲ್ಲಿರುವ ಮರಳನ್ನು ಜಿ.ಪಿ.ಎಸ್ ಅಳವಡಿಸಿದ ವಾಹನಗಳ ಮೂಲಕ ಸಾರಿಗೆ ನಿಯಮಾವಳಿಯಂತೆ ಹೇರುಭಾರ ಸಾಮರ್ಥ್ಯಕ್ಕೆ ಅನುಗುಣವಾಗಿ ಖನಿಜ ರವಾನೆ ಪರವಾನಿಗೆಯೊಂದಿಗೆ ಮರಳನ್ನು ಗ್ರಾಹಕರಿಗೆ ನೀಡತಕ್ಕದ್ದು.

**VIII. ಆನ್ ಲೈನ್ ಬುಕಿಂಗ್ ಮತ್ತು ಮಾರಾಟ:**

ಅ. ಸರ್ಕಾರವು ಅಧಿಸೂಚನೆ ಮೂಲಕ ನಿಗದಿಪಡಿಸಿದ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆ / ಕಾರ್ಪೋರೇಷನ್/ ನಿಗಮ / ಮಂಡಳಿಗಳು, ಗ್ರಾಹಕರ ನೋಂದಣಿ ಮತ್ತು ವಾಹನಗಳ ನೋಂದಣಿ ಜೊತೆಗೆ ಆನ್‌ಲೈನ್ ಬುಕಿಂಗ್ ಮೂಲಕ ಮರಳನ್ನು ಬಳಕೆದಾರನಿಗೆ ತಲುಪಿಸುವ ವ್ಯವಸ್ಥೆಯನ್ನು ಕಲ್ಪಿಸುವುದು.

ಆ. ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರಂತೆ ಹರಾಜು ಮೂಲಕ ಮರಳು ಗುತ್ತಿಗೆ ಪಡೆದ ಗುತ್ತಿಗೆದಾರರು ಸಹ ಆನ್‌ಲೈನ್ ಬುಕಿಂಗ್ ಮೂಲಕ ಗ್ರಾಹಕರಿಗೆ ಮರಳನ್ನು ನೀಡತಕ್ಕದ್ದು.

**IX. ಸರ್ಕಾರಿ ಕಾಮಗಾರಿಗಳಿಗೆ ಮರಳು ಬ್ಲಾಕ್ ಗಳ ಮೀಸಲು:**

ಗುತ್ತಿಗೆದಾರರು ನಿರ್ವಹಿಸುವ ಸರ್ಕಾರಿ ಕಾಮಗಾರಿ/ ಇತರೆ ಸರ್ಕಾರಿ ಬೃಹತ್ ಯೋಜನೆಗಳಿಗೆ ಮರಳು ಅವಶ್ಯವಿದ್ದಲ್ಲಿ, ಜಿಲ್ಲಾ ಮರಳು ಸಮಿತಿಯಿಂದ ಮರಳು ಬ್ಲಾಕಗಳನ್ನು ಗುರುತಿಸಿ ಗುತ್ತಿಗೆದಾರರಿಗೆ ಮೀಸಲಿರಿಸಬಹುದಾಗಿರುತ್ತದೆ ಮತ್ತು ಜಿಲ್ಲಾ ಮರಳು ಸಮಿತಿ ನಿರ್ಧರಿಸಿದ ದರವನ್ನು ಸರ್ಕಾರಕ್ಕೆ ಪಾವತಿಸಿ ಮರಳನ್ನು ಸದರಿ ಕಾಮಗಾರಿಗಳಿಗೆ ಮಾತ್ರ ಉಪಯೋಗಿಸಿಕೊಳ್ಳಲು ಪರವಾನಿಗೆ ನೀಡತಕ್ಕದ್ದು.

**X. ಪಟ್ಟಾ ಭೂಮಿಯಲ್ಲಿ ಮರಳು ಗಣಿಗಾರಿಕೆ:**

ಅ. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ, ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರಂತೆ, ಲೈಸೆನ್ಸ್ ನೀಡುವ ಪ್ರಕ್ರಿಯೆಯನ್ನು ಮುಂದುವರೆಸುವುದು.

ಆ. MoEF ಮಾರ್ಗಸೂಚಿಯಂತೆ, ಪಟ್ಟಾ ಭೂಮಿಯಲ್ಲಿ ಲೈಸೆನ್ಸ್ ಮಂಜೂರು ಮಾಡುವ ಮೊದಲು ಸಕ್ಷಮ ಪ್ರಾಧಿಕಾರಿಯು ಅನುಮೋದಿತ ಕ್ವಾರಿ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆಯತಕ್ಕದ್ದು.

XI. ಪ್ರಸ್ತುತ ಚಾಲ್ತಿಯಲ್ಲಿರುವ ಗುತ್ತಿಗೆಗಳ ಸ್ಥಿತಿ:

ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರಂತೆ, ಟೆಂಡರ್ ಕಂ ಹರಾಜು ಮೂಲಕ ಮಂಜೂರಾದ ಮರಳು ಗುತ್ತಿಗೆ ಪ್ರದೇಶಗಳಲ್ಲಿ ಸದರಿ ಮರಳು ಗುತ್ತಿಗೆ ಅವಧಿಯು ಮುಗಿಯುವವರೆಗೂ ಗಣಿಗಾರಿಕೆ ಮಾಡಿ ಮರಳು ವಿಲೇವಾರಿ ಮಾಡಲು ಅವಕಾಶ ಕಲ್ಪಿಸಿದೆ.

XII. ಹೊರ ರಾಜ್ಯದಿಂದ ಮರಳು ಸಾಗಾಣಿಕೆಗೆ ನಿಯಂತ್ರಣ ಶುಲ್ಕ:

ಹೊರ ರಾಜ್ಯಗಳಿಂದ ಮರಳು ಸಾಗಾಣಿಕೆ ಪರವಾನಿಗೆಯನ್ನು ಹೊಂದಿ ರಾಜ್ಯದ ಗಡಿ ದಾಟಿ ಬರುವ ಮರಳು ಸಾಗಾಣಿಕೆ ವಾಹನಗಳು, ಜಿಲ್ಲಾ ಮರಳು ಸಮಿತಿ/ ಇಲಾಖೆಯ ಖನಿಜ ದಾಸ್ತಾನು ಕೇಂದ್ರ / ತನಿಖಾ ಠಾಣೆಗಳಲ್ಲಿ ಪ್ರತಿ ಮೆಟ್ರಿಕ್ ಟನ್ ಮರಳಿಗೆ ಸರ್ಕಾರದಿಂದ ಕಾಲಕಾಲಕ್ಕೆ ನಿಗದಿಪಡಿಸುವ ನಿಯಂತ್ರಣ ಶುಲ್ಕ (Regulation charge) ವನ್ನು ಸರ್ಕಾರಕ್ಕೆ ಪಾವತಿಸಿ, ಸೂಕ್ತ ಪರವಾನಿಗೆ ಪಡೆದು ಮರಳನ್ನು ಸಾಗಾಣಿಕೆ ಮಾಡತಕ್ಕದ್ದು.

XIII. ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು ಮತ್ತು ಸಾಗಾಣಿಕೆ ವಿರುದ್ಧ ಕ್ರಮ:

ಅ. ಜಿಲ್ಲಾ ಮರಳು ಸಮಿತಿಯಿಂದ ಮರಳು ಸಾಗಾಣಿಕೆ ವಾಹನಗಳ ಚಲನವಲನಗಳ ಮೇಲೆ "Sand Vehicle Tracking System" ತಂತ್ರಾಂಶದ ಮೂಲಕ ನಿಗಾವಹಿಸುವುದು.

ಆ. ಜಿಲ್ಲಾ ಮರಳು ಸಮಿತಿಯಿಂದ ಆನ್‌ಲೈನ್ ಬುಕಿಂಗ್ ನ್ನು Sand Sale Management & Monitoring System(SSMMS) ಮೂಲಕ ನಿಗಾವಹಿಸುವುದು.

ಇ. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧೀನದಲ್ಲಿ Mineral Protection Force ನ್ನು ಸ್ಥಾಪಿಸಿ, ಸದರಿ ಕಾರ್ಯಪಡೆಯ ಮೂಲಕ ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು ಮತ್ತು ಸಾಗಾಣಿಕೆ ವಿರುದ್ಧ ಕ್ರಮ ಕೈಗೊಳ್ಳುವುದು.

ಈ. ಜಿಲ್ಲಾ ಮರಳು ಸಮಿತಿ ಮತ್ತು ತಾಲ್ಲೂಕು-ಮರಳು ಸಮಿತಿಯ ಸದಸ್ಯ ಇಲಾಖೆ ಅಧಿಕಾರಿಗಳಿಂದ ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ಮಾಡುವವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 21 ಮತ್ತು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 3 ಮತ್ತು ನಿಯಮ 43(5) ರಂತೆ ಕ್ರಮ ಕೈಗೊಳ್ಳುವುದು.

XIV. ಮರಳು ನೀತಿ ಜಾರಿಗೆ ಸಂಬಂಧಿಸಿದಂತೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿಗಳಿಗೆ ತಿದ್ದುಪಡಿ ಮತ್ತು ಆದೇಶ:

ರಾಜ್ಯ ಸರ್ಕಾರವು ಸದರಿ ಮರಳು ನೀತಿ ಜಾರಿಗೆ ಸಂಬಂಧಿಸಿದಂತೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿಗಳಿಗೆ ಅಗತ್ಯ ತಿದ್ದುಪಡಿ ತರುವ ಮತ್ತು ಮಾರ್ಗಸೂಚಿಗಳನ್ನು, ಸರ್ಕಾರಿ ಆದೇಶದ ಮೂಲಕ ಜಾರಿ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

ಸಿಐ 344 ಎಂಎಂಎನ್ 2019

********

ಸರ್ಕಾರದ ಆದೇಶ ಸಂಖ್ಯೆ ಸಿಐ 344 ಎಂಎಂಎನ್ 2019, ಬೆಂಗಳೂರು.

ದಿನಾಂಕ05.05.2020 ಕ್ಕೆ ಅನುಬಂಧ–II

**ಹೊಸ ಮರಳು ನೀತಿ–2020ರ ಅನುಷ್ಠಾನಕ್ಕಾಗಿ ಹೊರಡಿಸಿರುವ ಮಾರ್ಗಸೂಚಿಗಳು.**

ರಾಜ್ಯದ ಭೌಗೋಳಿಕ, ಭೂವೈಜ್ಞಾನಿಕ ಮತ್ತು ಆಡಳಿತಾತ್ಮಕ ಹಿನ್ನೆಲೆಯನ್ನು ಪರಿಗಣಿಸಿ, ಸರ್ಕಾರಿ ಮತ್ತು ಸಾರ್ವಜನಿಕ ನಿರ್ಮಾಣ ಕಾಮಗಾರಿಗಳಿಗೆ ನಿಯಮಿತವಾಗಿ ಮತ್ತು ಸುಲಭವಾಗಿ ಕೈಗೆಟಕುವ ದರದಲ್ಲಿ ಮರಳು ದೊರೆಯುವಂತೆ ಮತ್ತು ಪರಿಸರಕ್ಕೆ ಧಕ್ಕೆಯಾಗದಂತೆ ವೈಜ್ಞಾನಿಕವಾಗಿ ಮರಳು ಗಣಿಗಾರಿಕೆಗೆ ಅವಕಾಶ ಕಲ್ಪಿಸಲು ಹೊಸ ಮರಳು ನೀತಿ, 2020ನ್ನು ಜಾರಿಗೊಳಿಸಲಾಗಿರುತ್ತದೆ.

I, II ಮತ್ತು III ನೇ ಶ್ರೇಣಿಯ ಹಳ್ಳ / ತೊರೆ ಮತ್ತು ಕೆರೆಗಳಲ್ಲಿ ಲಭ್ಯವಿರುವ ಮರಳನ್ನು ತೆಗೆಯುವ ಮತ್ತು ವಿಲೇವಾರಿ ಮಾಡುವ ಸಂಪೂರ್ಣ ಹೊಣೆಗಾರಿಕೆಯನ್ನು ಸಂಬಂಧಿಸಿದ ಗ್ರಾಮ ಪಂಚಾಯತ್ ಗಳಿಗೆ ಮತ್ತು IV, V ಮತ್ತು VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಲಭ್ಯವಿರುವ ಮರಳನ್ನು ಮತ್ತು ಅಣೆಕಟ್ಟೆ / ಜಲಾಶಯ/ ಬ್ಯಾರೇಜ್‌ಗಳು ಮತ್ತು ಸದರಿ ಹಿನ್ನೀರಿನ ಪ್ರದೇಶಗಳಲ್ಲಿ ಹೂಳು ತೆಗೆಯುವ ಮುಖಾಂತರ ದೊರೆತ ಮರಳನ್ನು ತೆಗೆದು ದಾಸ್ತಾನು ಪ್ರಾಂಗಣಕ್ಕೆ ಸಾಗಾಣಿಕೆ ಮಾಡಿ, ಗ್ರಾಹಕರಿಗೆ ಮಾರಾಟ ಮಾಡುವ ಸಂಪೂರ್ಣ ಹೊಣೆಗಾರಿಕೆಯನ್ನು ಸರ್ಕಾರದಿಂದ ಅಧಿಸೂಚನೆ ಮೂಲಕ್ಕ ನಿಗದಿಪಡಿಸಿದ ಸರ್ಕಾರಿ ಇಲಾಖೆ / ನಿಗಮ / ಮಂಡಳಿಗಳಿಗೆ ನೀಡಲಾಗಿರುತ್ತದೆ.

ರಾಜ್ಯದಲ್ಲಿ ಮರಳು ಗಣಿಗಾರಿಕೆ, ಸಾಗಾಣಿಕೆ ದಾಸ್ತಾನು ಮತ್ತು ವಿಲೇವಾರಿ ಮಾಡಲು ಹೊಸ ಮರಳು ನೀತಿ, 2020ನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

**I, II ಮತ್ತು IIIನೇ ಶ್ರೇಣಿಯ ಹಳ್ಳ/ ತೊರೆ ಮತ್ತು ಕೆರೆಗಳಲ್ಲಿ, IV, V , VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಮತ್ತು ಅಣೆಕಟ್ಟೆ/ಜಲಾಶಯ/ಬ್ಯಾರೇಜ್‌ಗಳು ಮತ್ತು ಹಿನ್ನೀರಿನ ಪ್ರದೇಶಗಳಲ್ಲಿ ಮರಳನ್ನು ತೆಗೆಯಲು ಅನುಮತಿ ನೀಡುವ ಕುರಿತು:**

1) ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಹ ಈ ಕೆಳಕಂಡ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡಿರುವಂತಹ ಜಿಲ್ಲಾ ಮರಳು ಸಮಿತಿಯನ್ನು ರಚಿಸತಕ್ಕದ್ದು. ಸದರಿ ಸಮಿತಿಯ ಸದಸ್ಯರು ಗಳ ವಿವರ ಈ ಕೆಳಕಂಡಂತಿವೆ.

| | | |
|---|---|---|
| 1 | ಜಿಲ್ಲಾಧಿಕಾರಿಗಳು. | ಅಧ್ಯಕ್ಷರು |
| 2 | ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್. | ಸದಸ್ಯರು |
| 3. | ನಗರ ಪೊಲೀಸ್ ಆಯುಕ್ತರು ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು. | ಸದಸ್ಯರು |

| | | |
|---|---|---|
| 4 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. | ಸದಸ್ಯರು |
| 5 | ಕಾರ್ಯಪಾಲಕ ಅಭಿಯಂತರರು, ಜಲ ಸಂಪನ್ಮೂಲ ಇಲಾಖೆ. | ಸದಸ್ಯರು |
| 6 | ಪ್ರಾದೇಶಿಕ ಸಾರಿಗೆ ಅಧಿಕಾರಿ, ಪ್ರಾದೇಶಿಕ ಸಾರಿಗೆ ಇಲಾಖೆ. | ಸದಸ್ಯರು |
| 7 | ಪರಿಸರ ಅಧಿಕಾರಿ, ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ. | ಸದಸ್ಯರು |
| 8 | ಜಿಲ್ಲೆಯ ಎಲ್ಲಾ ಉಪ ವಿಭಾಗದ ಉಪ ವಿಭಾಗಾಧಿಕಾರಿಗಳು, ಕಂದಾಯ ಇಲಾಖೆ. | ಸದಸ್ಯರು |
| 9 | ಜಿಲ್ಲೆಯಲ್ಲಿನ ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು, ಕಂದಾಯ ಇಲಾಖೆ. | ಸದಸ್ಯರು |
| 10 | ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ. | ಸದಸ್ಯ ಕಾರ್ಯದರ್ಶಿ |

ಟಿಪ್ಪಣಿ:- ಸಮಿತಿಯ ಅಧ್ಯಕ್ಷರು ಯಾವುದೇ ಅಧಿಕಾರಿಯನ್ನು ಅಥವಾ ವಿಷಯ ಕುರಿತಂತೆ ಆಳವಾದ ಜ್ಞಾನವಿರುವ ಯಾವುದೇ ವ್ಯಕ್ತಿಯನ್ನು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸದಸ್ಯನಾಗಿರುವಂತೆ ಆಹ್ವಾನಿಸಬಹುದು.

2) ಪ್ರತಿಯೊಂದು ಕಂದಾಯ ವಿಭಾಗದಲ್ಲಿನ ತಾಲ್ಲೂಕಿನಲ್ಲಿಯೂ ಸಹ ಈ ಕೆಳಕಂಡ ಇಲಾಖೆ ಅಧಿಕಾರಿಗಳನ್ನು ಒಳಗೊಂಡಿರುವಂತಹ ತಾಲ್ಲೂಕು ಮರಳು ಸಮಿತಿಯನ್ನು ರಚಿಸತಕ್ಕದ್ದು, ಸದರಿ ಸಮಿತಿ ಸದಸ್ಯರ ವಿವರ ಈ ಕೆಳಕಂಡಂತಿದೆ.

| | | |
|---|---|---|
| 1 | ಉಪ ವಿಭಾಗಾಧಿಕಾರಿಗಳು, ಕಂದಾಯ ಇಲಾಖೆ. | ಅಧ್ಯಕ್ಷರು |
| 2 | ಕಾರ್ಯ ನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್. | ಸದಸ್ಯರು |
| 3 | ಉಪ ಪೊಲೀಸ್ ಆಯುಕ್ತರು / ಪೊಲೀಸ್ ಉಪಾಧೀಕ್ಷಕರು | ಸದಸ್ಯರು |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. | ಸದಸ್ಯರು |
| 5 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಲ ಸಂಪನ್ಮೂಲ ಇಲಾಖೆ. | ಸದಸ್ಯರು |
| 6 | ತಹಶೀಲ್ದಾರರು. | ಸದಸ್ಯ ಕಾರ್ಯದರ್ಶಿ |
| 7 | ಮೋಟಾರ್ ವಾಹನ ನಿರೀಕ್ಷಕರು, ಪ್ರಾದೇಶಿಕ ಸಾರಿಗೆ ಇಲಾಖೆ. | ಸದಸ್ಯರು |
| 8 | ಸಹಾಯಕ ಪರಿಸರ ಅಧಿಕಾರಿ, ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ. | ಸದಸ್ಯರು |
| 9 | ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ. | ಸದಸ್ಯರು |
| 10 | ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅಥವಾ ಪಂಚಾಯಿತಿ ಕಾರ್ಯದರ್ಶಿ, ಗ್ರಾಮ ಪಂಚಾಯತಿ. | ಸದಸ್ಯರು |

ಟಿಪ್ಪಣಿ.–ಸಮಿತಿಯ ಅಧ್ಯಕ್ಷರು ಯಾವುದೇ ಅಧಿಕಾರಿಯನ್ನು ಅಥವಾ ವಿಷಯ ಕುರಿತಂತೆ ಆಳವಾದ ಜ್ಞಾನವಿರುವ ಯಾವುದೇ ವ್ಯಕ್ತಿಯನ್ನು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸದಸ್ಯನಾಗಿರುವಂತೆ ಆಹ್ವಾನಿಸಬಹುದು.

3) ಜಿಲ್ಲಾ ಮರಳು ಸಮಿತಿಯ ಅಧಿಕಾರ ಮತ್ತು ಕರ್ತವ್ಯಗಳು:

I) ಮರಳು ನಿಕ್ಷೇಪಗಳ ಗುರುತಿಸುವಿಕೆ ಹಾಗೂ ಮರಳಿನ ಸಮರ್ಪಕ ವಿಲೇವಾರಿ ಕುರಿತು ಕನಿಷ್ಟ ಎರಡು ತಿಂಗಳಿಗೊಮ್ಮೆ ಸಭೆಯನ್ನು ಆಯೋಜಿಸತಕ್ಕದ್ದು.

II) ಈ ನಿಯಮಗಳ ಉಪಬಂಧಗಳನ್ವಯ ಮರಳು ಗಣಿಗಾರಿಕೆ ಪರವಾನಗಿಗಳ ಮಂಜೂರಾತಿ ತೀರ್ಮಾನಗಳನ್ನು ಕೈಗೊಳ್ಳತಕ್ಕದ್ದು.

III) ಜಂಟಿ ಸ್ಥಳ ಪರಿಶೀಲನಾ ತಂಡವು ತಾಲ್ಲೂಕು ಮರಳು ಸಮಿತಿಯ ಮೂಲಕ ಸಲ್ಲಿಸಿದ ವರದಿಯನ್ನು ಪಡೆಯತಕ್ಕದ್ದು.

IV) ತಾಲ್ಲೂಕು ಮರಳು ಸಮಿತಿಯು ಸಲ್ಲಿಸಿದ ಶಿಫಾರಸ್ಸುಗಳನ್ನು ಪರಿಶೀಲಿಸಿ, ಅಗತ್ಯವಿರುವ ಸೂಕ್ತ ಮಾರ್ಪಾಡುಗಳೊಂದಿಗೆ ಅಂಗೀಕರಿಸುವುದು. ನಂತರ ಗ್ರಾಮ ಪಂಚಾಯತ್ ಗಳಿಗೆ (I, II ಮತ್ತು III ನೇ ಶ್ರೇಣಿಯ ಹಳ್ಳ / ತೊರೆ) ಮತ್ತು ಸರ್ಕಾರದಿಂದ ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ ಅಥವಾ ಸರ್ಕಾರದ ಅಧೀನದಲ್ಲಿರುವ ಸಂಸ್ಥೆ / ನಿಗಮಗಳಿಗೆ ಅಥವಾ ಸ್ಥಳೀಯ ಕಾಮಗಾರಿ ನಿರ್ವಹಿಸುವ ಸರ್ಕಾರಿ ಇಲಾಖೆಗಳಿಗೆ IV, V ಮತ್ತು VI ನೇ ಶ್ರೇಣಿಯ ಹೊಳೆ / ನದಿ ಪಾತ್ರದಲ್ಲಿ ಮರಳು ತೆಗೆಯಲು ಬ್ಲಾಕ್ ಗಳನ್ನು ಮೀಸಲಿರಿಸಿ, ಅಧಿಸೂಚನೆ ಹೊರಡಿಸಿ, ರಾಜ್ಯ ಪತ್ರದಲ್ಲಿ ಪ್ರಕಟಿಸುವುದು.

V) ಮರಳು ಗಣಿಗಾರಿಕೆಗಾಗಿ ಜಿಲ್ಲಾ ಮರಳು ಸಮಿತಿ ವತಿಯಿಂದ ಆಶಯ ಪತ್ರ ಪಡೆದಂತಹ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳಿಗೆ ಗಣಿ ಯೋಜನೆ ಮತ್ತು ಪರಿಸರ ಅನುಮತಿ ಪತ್ರ ಪಡೆದು ಸಲ್ಲಿಸಲು ತಿಳಿಸುವುದು.

VI) ಮಾಜಿ ಸೇನಾಧಿಕಾರಿ, ನಾಗರಿಕ ಸೇವೆಯಿಂದ ನಿವೃತ್ತಿ ಹೊಂದಿರುವ ಅಧಿಕಾರಿ ಮತ್ತು ಪರಿಸರ / ಗಣಿಗಾರಿಕೆ ಕ್ಷೇತ್ರದಲ್ಲಿ ಶೈಕ್ಷಣಿಕ ಹಿನ್ನೆಲೆ ಹೊಂದಿರುವ ನಿವೃತ್ತ ಪ್ರಾಧ್ಯಾಪಕರು ಗಳನ್ನೊಳಗೊಂಡ ಮೂರು ಜನರ ಸ್ವತಂತ್ರ ತಜ್ಞರ ಸಮಿತಿಯನ್ನು ರಚಿಸುವುದು. ಸದರಿ ಸಮಿತಿಯು ಅನಧಿಕೃತ ಮರಳು ಗಣಿಗಾರಿಕೆಯಿಂದ ಪರಿಸರಕ್ಕೆ ಆಗಿರುವ ಹಾನಿಯ ಪ್ರಮಾಣವನ್ನು ಅಂದಾಜಿಸಿ, ಜಿಲ್ಲಾ ಮರಳು ಸಮಿತಿಗೆ ವರದಿ ಸಲ್ಲಿಸುವುದು. ಜಿಲ್ಲಾ ಮರಳು ಸಮಿತಿಯು ಗಣಿಗಾರಿಕೆ ಪ್ರದೇಶಗಳ ಸುಧಾರಣೆಗೆ ಕ್ರಮ ಕೈಗೊಳ್ಳಲು ತಗಲುವ ವೆಚ್ಚವನ್ನು ಸಂಬಂಧಪಟ್ಟವರಿಂದ ವಸೂಲು ಮಾಡಲು ಅಗತ್ಯ ಕ್ರಮವಹಿಸುವುದು.

VII) ಹೊಸ ಮರಳು ನೀತಿ ಜಾರಿಯಾಗುವ ಮೊದಲು ಹರಾಜು ಮೂಲಕ ಗುತ್ತಿಗೆ ಪಡೆದ ಮರಳು ಗುತ್ತಿಗೆದಾರರಿಗೆ, ಸದರಿ ಮರಳು ಗುತ್ತಿಗೆ ಪ್ರದೇಶದಲ್ಲಿ ಪರಿಸರ ಅನುಮತಿ ಪತ್ರದಲ್ಲಿ ನಿಗದಿಪಡಿಸಿದ ವಾರ್ಷಿಕ ಉತ್ಪಾದನೆ ಪ್ರಮಾಣದಲ್ಲಿ ಶೇ.25 ರಷ್ಟು ಪ್ರಮಾಣದ ಮರಳನ್ನು ಸರ್ಕಾರಿ ಕಾಮಗಾರಿಗಳಿಗೆ ಮತ್ತು ಕಡಿಮೆ ವೆಚ್ಚದ ವಸತಿ ಯೋಜನೆಗಳಿಗೆ ಜಿಲ್ಲಾ ಮರಳು ಸಮಿತಿ ನಿಗದಿಪಡಿಸಿದ ಮಾರಾಟ ದರದಲ್ಲಿ ಹಂಚಿಕೆ ಮಾಡಲು ನಿರ್ದೇಶನ ಹೊರಡಿಸಬಹುದಾಗಿರುತ್ತದೆ.

VIII) ಅಗತ್ಯವಿರುವ ಸ್ಥಳಗಳಲ್ಲಿ ಮರಳು ಸಾಗಾಣಿಕೆಯನ್ನು ನಿಯಂತ್ರಿಸಲು ತನಿಖಾ ಠಾಣೆಗಳನ್ನು ಸ್ಥಾಪಿಸತಕ್ಕದ್ದು ಮತ್ತು ಅಕ್ರಮ ಮರಳು ಗಣಿಗಾರಿಕೆ, ದಾಸ್ತಾನು ಮತ್ತು ಸಾಗಾಣಿಕೆಯನ್ನು ಜಿಲ್ಲಾ ಮರಳು ಸಮಿತಿಯ ಸದಸ್ಯ ಇಲಾಖೆಗಳಿಂದ ಹಾಗೂ ತಾಲ್ಲೂಕು ಸಮಿತಿ ಮೂಲಕ ತಡೆಗಟ್ಟಲು ಅಗತ್ಯ ಕ್ರಮ ವಹಿಸತಕ್ಕದ್ದು.

IX) ಜಿಲ್ಲೆಯಲ್ಲಿನ ಮರಳು ಗಣಿಗಾರಿಕೆ ಪ್ರದೇಶಗಳಲ್ಲಿನ ಮರಳು ಗಣಿಗಾರಿಕೆ ವಿವರ, ಜಿಲ್ಲೆಯೊಳಗೆ ಮತ್ತು ಹೊರ ಜಿಲ್ಲೆಗಳಿಗೆ ಸಾಗಾಣಿಕೆಯಾದ ಮರಳಿನ ಪ್ರಮಾಣ, ಮರಳು ಸಾಗಾಣಿಕೆಗೆ ನಿಗದಿಪಡಿಸಿದ ಮಾರ್ಗ ಮತ್ತು ಅನುಮತಿ ನೀಡಿದ ಪ್ರಮಾಣ ಇತ್ಯಾದಿ ಮಾಹಿತಿಯನ್ನು ನೆರೆಯ ಜಿಲ್ಲೆಯೊಂದಿಗೆ ಹಂಚಿಕೊಳ್ಳತಕ್ಕದ್ದು ಮತ್ತು ನೆರೆಯ ಜಿಲ್ಲೆಯ ಜಿಲ್ಲಾಧಿಕಾರಿಗಳೊಂದಿಗೆ ಪರಸ್ಪರ ಚರ್ಚಿಸಿ, ಸೂಕ್ತ ಸ್ಥಳದಲ್ಲಿ ಅಧಿಕಾರಿಗಳ ಸಮನ್ವಯ ಸಭೆಗಳನ್ನು ನಡೆಸುವುದು.

X) ಮರಳು ಕೊರತೆ ಇರುವ ಸ್ಥಳ/ತಾಲ್ಲೂಕು/ಜಿಲ್ಲೆಯಲ್ಲಿ ಮರಳು ದಾಸ್ತಾನು ಕೇಂದ್ರ ಸ್ಥಾಪಿಸಲು ಮತ್ತು ಸದರಿ ದಾಸ್ತಾನು ಕೇಂದ್ರದಿಂದ ಮರಳು ಮಾರಾಟಕ್ಕೆ ಸಂಬಂಧಿಸಿದ ಇಲಾಖೆ/ ನಿಗಮ/ ಮಂಡಳಿಗಳಿಗೆ ಅನುಮತಿ ನೀಡತಕ್ಕದ್ದು.

XI) ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶಗಳು ಮತ್ತು ಮಾರ್ಗಸೂಚಿಗಳನ್ನು ಪಾಲನೆ ಮಾಡುವುದು.

4) ತಾಲ್ಲೂಕು ಮರಳು ಸಮಿತಿಯ ಅಧಿಕಾರ ಮತ್ತು ಕರ್ತವ್ಯಗಳು:

I) ಮರಳು ನಿಕ್ಷೇಪಗಳನ್ನು ಗುರುತಿಸುವಿಕೆ ಹಾಗೂ ಗ್ರಾಮ ಪಂಚಾಯಿತಿಗಳಿಂದ ಮರಳು ವಿಲೇವಾರಿ ಬಗ್ಗೆ ಚರ್ಚಿಸಲು ತಿಂಗಳಿಗೊಮ್ಮೆ ಸಭೆಯನ್ನು ಆಯೋಜಿಸುವುದು.

II) ಮರಳು ನಿಕ್ಷೇಪವಿರುವ ಪ್ರದೇಶಗಳನ್ನು ಪರಿಶೀಲನೆ ನಡೆಸುವುದು ಮತ್ತು ಗ್ರಾಮ ಪಂಚಾಯತ್ ಗಳಿಗೆ ಅಥವಾ ಸರ್ಕಾರಿ ಇಲಾಖೆ / ಸರ್ಕಾರಿ ಸಾಮ್ಯದ ನಿಗಮ / ಮಂಡಳಿಗಳಿಂದ ಮರಳು ತೆಗೆಯುವ ಉದ್ದೇಶಗಳಿಗಾಗಿ ಮರಳು ಬ್ಲಾಕ್ ಗಳನ್ನು ಗುರುತಿಸುವುದು.

III) ಮರಳು ನಿಕ್ಷೇಪಗಳನ್ನು ಗುರುತಿಸಿದ ಪ್ರದೇಶಗಳಲ್ಲಿ ಗರಿಷ್ಠ ಮೂರು ಮೀಟರ್ ಆಳದವರೆಗೆ ಅಥವಾ ಅಂತರ್ಜಲ ಮಟ್ಟದವರೆಗೆ ಇವುಗಳಲ್ಲಿ ಯಾವುದು ಕಡಿಮೆಯೋ ಸದರಿ ಮಿತಿಯೊಳಗೆ ಲಭ್ಯವಿರುವ ಮರಳಿನ ಪ್ರಮಾಣವನ್ನು, ತಹಶೀಲ್ದಾರ್ ನೇತೃತ್ವದಲ್ಲಿ ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ, ಅರಣ್ಯ ಇಲಾಖೆ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಗಳ ಅಧಿಕಾರಿಗಳ ತಂಡದಿಂದ ಅಂದಾಜಿಸುವುದು ಮತ್ತು ಗುರುತಿಸಿದ ಮರಳು ನಿಕ್ಷೇಪವಿರುವ ಪ್ರದೇಶಗಳ ಗಡಿಗಳನ್ನು ಜಿ.ಪಿ.ಎಸ್ ಕೋ-ಆರ್ಡಿನೇಟ್ಸ್ ಗಳೊಂದಿಗೆ ಗುರುತಿಸಿ ನಕ್ಷೆಯನ್ನು ತಯಾರಿಸುವುದು.

IV) I, II ಮತ್ತು IIIನೇ ಶ್ರೇಣಿಯ ಹಳ್ಳ/ಹೊಳೆ ಮತ್ತು ಕೆರೆಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿದ ತಂಡವು ಸಲ್ಲಿಸುವ ಶಿಫಾರಸ್ಸುಗಳನ್ನು ಪರಿಶೀಲಿಸಿದ ನಂತರ ಅಂಗೀಕರಿಸುವುದು ಅಥವಾ ಅಗತ್ಯವಿರುವವಂತಹ ಸೂಕ್ತ ಮಾರ್ಪಾಡುಗಳೊಂದಿಗೆ ಅಂಗೀಕರಿಸುವುದು. ನಂತರ ಗ್ರಾಮ ಪಂಚಾಯತಿಗಳಿಗೆ ಮರಳು ತೆಗೆಯಲು ಮರಳು ನಿಕ್ಷೇಪ ಗಳನ್ನು ಮೀಸಲಿರಿಸಿ, ಅಧಿಸೂಚನೆ ಹೊರಡಿಸಲು ಜಿಲ್ಲಾ ಮರಳು ಸಮಿತಿಗೆ ಸಲ್ಲಿಸುವುದು.

V) IV, V, VI ನೇ ಶ್ರೇಣಿಯ ಹೊಳೆ/ ನದಿಗಳಲ್ಲಿ ಮತ್ತು ಅಣೆಕಟ್ಟು/ಜಲಾಶಯ/ಬ್ಯಾರೇಜ್ ಗಳು ಮತ್ತು ಸದರಿ ಹಿನ್ನೀರಿನ ಪ್ರದೇಶಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿದ ಅಧಿಕಾರಿಗಳ ತಂಡವು ಸಲ್ಲಿಸಿರುವ ಸ್ಥಳ ಪರಿಶೀಲನಾ ವರದಿಯನ್ನು ಸ್ಪಷ್ಟ ಶಿಫಾರಸ್ಸಿನೊಂದಿಗೆ ಜಿಲ್ಲಾ ಮರಳು ಸಮಿತಿಗೆ ಅಧಿಸೂಚನೆ ಹೊರಡಿಸಲು ಸಲ್ಲಿಸುವುದು.

VI) ಎಲ್ಲಾ ಮರಳು ಬ್ಲಾಕ್ ಗಳಲ್ಲಿ ಈ ನಿಯಮಗಳ ಉಪಬಂಧಗಳನುಸಾರ ಮತ್ತು ಪರಿಸರ ಅನುಮತಿ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ವಯ ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ ಪರಿಶೀಲನೆ ಮತ್ತು ಮೇಲ್ವಿಚಾರಣೆ ನಡೆಸುವುದು.

VII) ಮರಳು ನೀತಿ, 2020ನ್ನು ಸಮರ್ಪಕವಾಗಿ ಜಾರಿಗೆ ತಂದು, ಅಕ್ರಮ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ನಿಯಂತ್ರಿಸಲು ತಾಲ್ಲೂಕು ಮರಳು ಸಮಿತಿಯ ಸದಸ್ಯ ಇಲಾಖೆಗಳಿಂದ ಹಾಗೂ ಅಗತ್ಯವಿದ್ದಲ್ಲಿ ಇತರೆ ಕಾನೂನು ಜಾರಿ ಇಲಾಖೆಗಳ ಸಹಾಯದಿಂದ ನಿಯಂತ್ರಿಸುವುದು.

VIII) ಮರಳು ನೀತಿ, 2020ರ ಅನುಷ್ಠಾನಕ್ಕಾಗಿ ಜಿಲ್ಲಾ ಮರಳು ಸಮಿತಿಗೆ ಅಗತ್ಯ ಶಿಫಾರಸ್ಸು ಮಾಡತಕ್ಕದ್ದು.

IX) ಜಿಲ್ಲಾ ಮರಳು ಸಮಿತಿಯಿಂದ ಕಾಲಕಾಲಕ್ಕೆ ವಹಿಸಿದಂತಹ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

5. ರಾಜ್ಯ ಮಟ್ಟದ ಉನ್ನತಾಧಿಕಾರಸ್ಥ ಸಮಿತಿ ರಚನೆ:

I. ರಾಜ್ಯಾದ್ಯಂತ ಸಮರ್ಪಕವಾಗಿ ಮರಳು ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ಹಾಗೂ ಜಿಲ್ಲಾ ಮರಳು ಸಮಿತಿಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮೇಲ್ವಿಚಾರಣೆ ನಡೆಸಲು ಮತ್ತು ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ, ದಾಸ್ತಾನು ಮತ್ತು ಶಾಸನಬದ್ಧ ನಿಬಂಧನೆ ಮತ್ತು ನಿಯಮಗಳ ಅನುಷ್ಠಾನಕ್ಕೆ ಅಗತ್ಯ ಮಾರ್ಗಸೂಚಿಯನ್ನು ಹೊರಡಿಸಲು ಈ ಕೆಳಕಂಡ ರಾಜ್ಯ ಮಟ್ಟದ ಉನ್ನತಾಧಿಕಾರಸ್ಥ ಸಮಿತಿಯನ್ನು ರಚಿಸಿದೆ.

| | | |
|---|---|---|
| 1 | ಸರ್ಕಾರದ ಮುಖ್ಯ ಕಾರ್ಯದರ್ಶಿಗಳು | ಅಧ್ಯಕ್ಷರು |
| 2 | ಪೋಲೀಸ್ ಮಹಾ ನಿರ್ದೇಶಕರು | ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ ಮತ್ತು ಸ.ಪ್ರ.ಕೈ) | ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪರಿಸರ ಮತ್ತು ಜೀವಿ ಶಾಸ್ತ್ರ ಇಲಾಖೆ. | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಇಲಾಖೆ. | ಸದಸ್ಯರು |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ | ಸದಸ್ಯರು |
| 7 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ | ಸದಸ್ಯರು |
| 8 | ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | ಸದಸ್ಯರು |
| 9 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸ್ಟೇಟ್ ಮೈನಿಂಗ್ ಕಾರ್ಪೋರೇಷನ್ (KSMCL) | ಸದಸ್ಯರು |
| 10 | ವ್ಯವಸ್ಥಾಪಕ ನಿರ್ದೇಶಕರು, ಹಟ್ಟಿ ಚಿನ್ನದ ಗಣಿ ನಿಯಮಿತ | ಸದಸ್ಯರು |
| 11 | ಆಯುಕ್ತರು, ಸಾರಿಗೆ ಇಲಾಖೆ. | ಸದಸ್ಯರು |
| 12 | ನಿರ್ದೇಶಕರು, ಅಂತರ್ಜಲ ನಿರ್ದೇಶನಾಲಯ. | ಸದಸ್ಯರು |
| 13 | ಆಯುಕ್ತರು/ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ. | ಸದಸ್ಯ ಕಾರ್ಯದರ್ಶಿ |

II. ರಾಜ್ಯ ಮಟ್ಟದ ಉನ್ನತಾಧಿಕಾರಸ್ಥ ಸಮಿತಿಯು ಪ್ರತಿ 03 ತಿಂಗಳಿಗೊಮ್ಮೆ ಸಭೆಯನ್ನು ನಡೆಸುವುದು. ಸದರಿ ಸಭೆಯಲ್ಲಿ ರಾಜ್ಯವ್ಯಾಪ್ತಿಯಲ್ಲಿನ ಮರಳು ವಿಲೇವಾರಿ ಪ್ರಕ್ರಿಯೆ, ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ, ದಾಸ್ತಾನು ಮತ್ತು ಶಾಸನಬದ್ಧ ನಿಬಂಧನೆ ಮತ್ತು ನಿಯಮಗಳ ಅನುಷ್ಠಾನಕ್ಕೆ ಅಗತ್ಯವಾದ ಮಾರ್ಗಸೂಚಿಗಳನ್ನು ಹೊರಡಿಸುವುದು.

6) **I, II ಮತ್ತು IIIನೇ ಶ್ರೇಣಿಯ ಹಳ್ಳ/ಹೊಳೆ ಮತ್ತು ಕೆರೆಗಳಲ್ಲಿ ಲಭ್ಯವಿರುವ ಮರಳನ್ನು ಗ್ರಾಮ ಪಂಚಾಯತ್ ಮೂಲಕ ವಿಲೇವಾರಿ ಹಾಗೂ ನಿಯಂತ್ರಣ:**

I) I, II ಮತ್ತು IIIನೇ ಶ್ರೇಣಿಯ ಹಳ್ಳ/ಹೊಳೆ/ಕೆರೆಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ತಹಶೀಲ್ದಾರ್ ನೇತೃತ್ವದಲ್ಲಿ, ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ, ಅರಣ್ಯ ಇಲಾಖೆ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಗಳ ಅಧಿಕಾರಿಗಳ ತಂಡದಿಂದ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ, ಗುರುತಿಸುವುದು.

II) ಗುರುತಿಸಿದ ಮರಳು ನಿಕ್ಷೇಪವಿರುವ ಪ್ರದೇಶಗಳಲ್ಲಿ ಮರಳಿನ ಪ್ರಮಾಣವನ್ನು ಅಂದಾಜಿಸಿ, ಗಡಿಗಳನ್ನು ಜಿ.ಪಿ.ಎಸ್ ಕೋ-ಆರ್ಡಿನೇಟ್ಸ್ ಗಳೊಂದಿಗೆ ಗುರುತಿಸಿ ನಕ್ಷೆಯೊಂದಿಗೆ ವರದಿ ತಯಾರಿಸುವುದು.

III)ಜಂಟಿ ಸ್ಥಳ ಪರಿಶೀಲನಾ ತಂಡವು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಗುರುತಿಸಿರುವ ಮರಳು ನಿಕ್ಷೇಪಗಳ ಪರಿಶೀಲನಾ ವರದಿಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ತಾಲ್ಲೂಕು ಮರಳು ಸಮಿತಿಗೆ ಸಲ್ಲಿಸುವುದು.

IV) ತಾಲ್ಲೂಕು ಸಮಿತಿಯು ಸದರಿ ಪ್ರಸ್ತಾವನೆಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಜಿಲ್ಲಾ ಮರಳು ಸಮಿತಿಗೆ ಮರಳು ನಿಕ್ಷೇಪವಿರುವ ಪ್ರದೇಶಗಳ ಅಧಿಸೂಚನೆಗಾಗಿ ಸಲ್ಲಿಸುವುದು.

V) ಜಿಲ್ಲಾ ಮರಳು ಸಮಿತಿಯಿಂದ ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಮರಳು ನಿಕ್ಷೇಪ ಪ್ರದೇಶಗಳನ್ನು ಮೀಸಲಿರಿಸಿ, ಅಧಿಸೂಚನೆ ಹೊರಡಿಸುವುದು.

VI) I, II ಮತ್ತು III ನೇ ಶ್ರೇಣಿಯ ಹಳ್ಳ/ಹೊಳೆ/ಕೆರೆಗಳಲ್ಲಿ ಗ್ರಾಮ ಪಂಚಾಯತಿ ವತಿಯಿಂದ ತೆಗೆದ ಮರಳನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ತಾಲ್ಲೂಕಿನ ಸ್ಥಳೀಯ ಯಾವುದೇ

ಸಾರ್ವಜನಿಕ, ಸರ್ಕಾರಿ ನಿರ್ಮಾಣ ಕಾಮಗಾರಿ ಮತ್ತು ಸಮುದಾಯಿತ್ವ ನಿರ್ಮಾಣ ಕಾಮಗಾರಿಗಳಿಗೆ ಬಳಸತಕ್ಕದ್ದು.

VII) I, II ಮತ್ತು III ನೇ ಶ್ರೇಣಿಯ ಹಳ್ಳ/ಹೊಳೆ/ಕೆರೆಗಳಲ್ಲಿ ತೆಗೆಯುವ ಮರಳನ್ನು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಗ್ರಾಮಗಳ ಗ್ರಾಹಕರುಗಳು ಹಾಗೂ ಸರ್ಕಾರಿ ಸ್ಥಳೀಯ ಕಾಮಗಾರಿಗಳ ಗುತ್ತಿಗೆದಾರರುಗಳು ಅಧಿಸೂಚಿತ ಮರಳು ನಿಕ್ಷೇಪವಿರುವ ಪ್ರದೇಶದಲ್ಲಿ ಸರ್ಕಾರದಿಂದ ನಿಗದಿಪಡಿಸಿದ ಗರಿಷ್ಠ ಮಾರಾಟ ದರವನ್ನು ಗ್ರಾಮ ಪಂಚಾಯತಿಗಳಿಗೆ ಪಾವತಿಸಿ, ರವಾನೆ ಪರವಾನಿಗೆ ಪಡೆದು, ಕಡಿಮೆ ಹೇರುಭಾರ ಸಾಮರ್ಥ್ಯದ ವಾಹನಗಳಾದ ಟ್ರಾಕ್ಟರ್, ಎತ್ತಿನಗಾಡಿ ಹಾಗೂ ಇತರ ಲಘು ವಾಹನಗಳಲ್ಲಿ ಮಾತ್ರ ಮರಳನ್ನು ಸ್ವಂತ ಖರ್ಚಿನಲ್ಲಿ ತುಂಬಿ ಸಾಗಾಣಿಕೆ ಮಾಡತಕ್ಕದ್ದು.

VIII) ಗ್ರಾಮ ಪಂಚಾಯಿತಿಯಿಂದ ಮರಳು ಸಾಗಾಣಿಕೆ ಪರವಾನಿಗೆಯನ್ನು ನೀಡುವ ಮೊದಲು ಗ್ರಾಹಕರುಗಳಿಂದ ಮನೆ ಅಥವಾ ಇತರೆ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ನಕ್ಷೆ ಅಥವಾ ಕಾಮಗಾರಿ ನಡೆಯುತ್ತಿರುವ ಛಾಯಾಚಿತ್ರ ಅಥವಾ ಕಾಮಗಾರಿ ಕೈಗೊಳ್ಳುತ್ತಿರುವ ಬಗ್ಗೆ ಇನ್ನಿತರೇ ಯಾವುದಾದರೊಂದು ದಾಖಲೆಗಳನ್ನು ಪಡೆದು, ಮರಳು ಸಾಗಾಣಿಕೆ ಪರವಾನಿಗೆಯನ್ನು ನೀಡುವುದು.

IX) ಗ್ರಾಮ ಪಂಚಾಯಿತಿಯಿಂದ, ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ನೀಡಲಾಗುವ ವಿಶೇಷ ರಕ್ಷಣಾತ್ಮಕವುಳ್ಳ ಪರವಾನಿಗೆ ಹಾಳೆ (Special Security Permit Papers) ಗಳಲ್ಲಿ ಮರಳು ಸಾಗಾಣಿಕೆ ಪರವಾನಿಗಯನ್ನು ಮುದ್ರಿಸಿ ಗ್ರಾಹಕರಿಗೆ ನೀಡುವುದು.

X) ಸದರಿ ಅಧಿಸೂಚಿತ ಪ್ರದೇಶದಲ್ಲಿ ಮರಳು ತೆಗೆಯುವ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯಿಂದ ನೇಮಿಸಲ್ಪಟ್ಟ ಸಿಬ್ಬಂದಿಯು ಕಡ್ಡಾಯವಾಗಿ ಹಾಜರಿರತಕ್ಕದ್ದು.

XI) ಅಧಿಸೂಚಿತ ಪ್ರದೇಶಗಳಲ್ಲಿ, ಬೆಳಿಗ್ಗೆ 6-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಮಾತ್ರ ಮರಳು ತೆಗೆಯುವಿಕೆ ಮತ್ತು ಸಾಗಾಣಿಕೆ ಕಾರ್ಯವನ್ನು ನಿರ್ವಹಿಸತಕ್ಕದ್ದು. ಸಂಜೆ 6 ಗಂಟೆಯ ನಂತರ ಮರಳು ತೆಗೆಯುವಿಕೆ, ತುಂಬುವಿಕೆ ಮತ್ತು ಸಾಗಾಣಿಕೆಯನ್ನು ಅನಧಿಕೃತ ಮರಳು ಗಣಿ ಚಟುವಟಿಕೆ ಎಂದು ಪರಿಗಣಿಸಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಂತೆ ಕ್ರಮಕೈಗೊಳ್ಳುವುದು.

XII) ಗ್ರಾಹಕರು ಮರಳು ಸಾಗಾಣಿಕೆಗೆ ಪಡೆದ ಖನಿಜ ರವಾನೆ ಪರವಾನಿಗೆ ಪ್ರಮಾಣಕ್ಕನುಗುಣವಾಗಿ ಅಧಿಸೂಚಿತ ಪ್ರದೇಶಗಳಲ್ಲಿ ಮರಳನ್ನು ತೆಗೆದು, ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಮತ್ತು ಗ್ರಾಮ ಪಂಚಾಯತಿಯಿಂದ ನಿಯಮಾನುಸಾರ ಪರವಾನಿಗೆ ವಿತರಿಸುತ್ತಿರುವ ಕುರಿತು ತಾಲ್ಲೂಕು ಮರಳು ಸಮಿತಿಯ ಮೇಲ್ವಿಚಾರಣೆಯಲ್ಲಿ ನಡೆಸತಕ್ಕದ್ದು.

XIII) ಪರವಾನಿಗೆ ಪಡೆದ ಗ್ರಾಮ ಪಂಚಾಯಿತಿಗಳಿಗೆ ಅಧಿಸೂಚಿತ ಮರಳು ನಿಕ್ಷೇಪ ಪ್ರದೇಶಗಳಲ್ಲಿ ಮರಳು ತೆಗೆಯಲು ಗರಿಷ್ಠ ಒಂದು ವರ್ಷ ಕಾಲಾವಧಿಯನ್ನು ಅಥವಾ ಮರಳು ನಿಕ್ಷೇಪ ಮುಕ್ತಾಯವಾಗುವವರೆಗೆ ಯಾವುದು ಮೊದಲೊ ಸದರಿ ಅವಧಿಯವರೆಗೆ ಅನುಮತಿ ನೀಡತಕ್ಕದ್ದು.

XIV) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಯಾಗುತ್ತಿರುವುದು ಕಂಡುಬಂದಲ್ಲಿ ತಾಲ್ಲೂಕು ಮರಳು ಸಮಿತಿಯು ನಿಯಮಾನುಸಾರ ಕ್ರಮ ಕೈಗೊಳ್ಳತಕ್ಕದ್ದು.

7). **IV, V ಮತ್ತು VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಲಭ್ಯವಿರುವ ಮರಳನ್ನು ಗಣಿಗಾರಿಕೆ ನಡೆಸಲು ಮತ್ತು ಅಣೆಕಟ್ಟು/ಜಲಾಶಯ/ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಮರಳು ತೆಗೆಯುವಿಕೆ ಮತ್ತು ನಿಯಂತ್ರಣ:**

I) IV, V ಮತ್ತು VIನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಮತ್ತು ಅಣೆಕಟ್ಟು/ಜಲಾಶಯ/ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಜಿಲ್ಲಾ ಮರಳು ಸಮಿತಿಯ ಸದಸ್ಯ ಇಲಾಖೆಗಳಾದ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಜಲಸಂಪನ್ಮೂಲ ಇಲಾಖೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಗುರುತಿಸುವುದು ಮತ್ತು ಮರಳು ನಿಕ್ಷೇಪಗಳು ಅರಣ್ಯ ವ್ಯಾಪ್ತಿಯಲ್ಲಿದ್ದಲ್ಲಿ ಸಂಬಂಧಿಸಿದ ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿಯಾಗಿ ಪರಿಶೀಲನೆ ನಡೆಸಿ, ಸದರಿ ಪ್ರದೇಶದಲ್ಲಿ ಸಂಗ್ರಹವಾಗಿರುವ ಮರಳಿನ ಪ್ರಮಾಣವನ್ನು ಅಂದಾಜಿಸುವುದು. ನಂತರ ಸದರಿ ಪ್ರದೇಶಗಳ ಗಡಿಗಳನ್ನು ಅಕ್ಷಾಂಶ–ರೇಖಾಂಶದೊಂದಿಗೆ ಗುರುತಿಸಿ, ನಕ್ಷೆ ತಯಾರಿಸಿ, ಜಿಲ್ಲಾ ಮರಳು ಸಮಿತಿಗೆ ಅಧಿಸೂಚನೆ ಹೊರಡಿಸಲು ಸೂಕ್ತ ಶಿಫಾರಸ್ಸಿನೊಂದಿಗೆ ವರದಿಯನ್ನು ಸಲ್ಲಿಸುವುದು.

II) ಜಂಟಿ ಸ್ಥಳ ಪರಿಶೀಲನಾ ತಂಡವು ಸಲ್ಲಿಸಿರುವ ವರದಿಯನ್ನು ಜಿಲ್ಲಾ ಮರಳು ಸಮಿತಿಯು ಪರಿಶೀಲಿಸಿ, ಅಗತ್ಯ ಮಾರ್ಪಾಡುಗಳೊಂದಿಗೆ ಮರಳು ಬ್ಲಾಕುಗಳಿಗೆ ಸರ್ಕಾರದಿಂದ ಅಧಿಸೂಚನೆ

ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳ ವತಿಯಿಂದ ಮರಳು ಗಣಿಗಾರಿಕೆ ನಡೆಸಲು ಜಿಲ್ಲಾ ಮರಳು ಸಮಿತಿಯು ಅಧಿಸೂಚನೆ ಹೊರಡಿಸುವುದು.

**7A) IV, V ಮತ್ತು VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಮರಳು ಗಣಿಗಾರಿಕೆಗೆ ಕಾರ್ಯಾದೇಶ ನೀಡುವ ಕುರಿತು:**

I) ಸರ್ಕಾರದಿಂದ ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗೆ IV, V ಮತ್ತು VI ನೇ ಶ್ರೇಣಿಯ ಹೊಳೆ / ನದಿಗಳ ಅಧಿಸೂಚಿತ ಬ್ಲಾಕ್ ಗಳಲ್ಲಿ ಮರಳು ಗಣಿಗಾರಿಕೆ ನಡೆಸಲು ಜಿಲ್ಲಾ ಮರಳು ಸಮಿತಿಯಿಂದ ಆಶಯ ಪತ್ರ (LOI) ನೀಡತಕ್ಕದ್ದು.

II) ಜಿಲ್ಲಾ ಮರಳು ಸಮಿತಿಯಿಂದ ಆಶಯ ಪತ್ರ ಪಡೆದಂತಹ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳು ಮರಳು ಗಣಿಗಾರಿಕೆಗಾಗಿ ಕ್ವಾರಿ ಯೋಜನೆ ತಯಾರಿಸಿ ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಗಳಿಗೆ ಸಲ್ಲಿಸಿ, ಅನುಮೋದನೆ ಪಡೆದ ನಂತರ ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ (SEIAA) ದಿಂದ ಪರಿಸರ ವಿಮೋಚನಾ ಪತ್ರ (EC) ಪಡೆದು, ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿಗಳಿಗೆ ಸಲ್ಲಿಸುವುದು.

III) ಪರಿಸರ ವಿಮೋಚನಾ ಪತ್ರ ಸಲ್ಲಿಸಿದ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳಿಗೆ ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಗಳು ಮರಳು ಗಣಿಗಾರಿಕೆ ಪ್ರಾರಂಭಿಸಲು ಕಾರ್ಯಾದೇಶ ನೀಡುವುದು.

IV) ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳಿಗೆ ಮರಳು ಗಣಿಗಾರಿಕೆ ನಡೆಸಲು ಐದು ವರ್ಷ ಕಾಲಾವಧಿ ಅಥವಾ ಮರಳು ನಿಕ್ಷೇಪ ಮುಕ್ತಾಯವಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೊ ಸದರಿ ಅವಧಿಯವರೆಗೆ ಅನುಮತಿ ನೀಡತಕ್ಕದ್ದು.

V) IV, V ಮತ್ತು VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳಲ್ಲಿ ದಾಸ್ತಾನಿರುವ ಮರಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994, ಪರಿಸರ ಸಂರಕ್ಷಣೆ ಕಾಯ್ದೆ, 1996, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ (MoEF) ದಿಂದ ಜಾರಿ ಮಾಡಿರುವ ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ,

2006, (EIA Notification-2006) ಮತ್ತು ಇದರನ್ವಯ ರಚಿತವಾಗಿ ಅನ್ವಯವಾಗುವ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳಿಗೆ ಒಳಪಟ್ಟು ಅನುಮತಿ ನೀಡುವುದು.

7B) ಅಣೆಕಟ್ಟು/ಜಲಾಶಯ/ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಮರಳು ತೆಗೆಯಲು ಕಾರ್ಯಾದೇಶ ನೀಡುವ ಕುರಿತು:

I) ಅಣೆಕಟ್ಟೆ/ಜಲಾಶಯ/ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಹೂಳಿನಲ್ಲಿ ಲಭ್ಯವಿರುವ ಮರಳು ತೆಗೆಯಲು ಜಿಲ್ಲಾ ಮರಳು ಸಮಿತಿಯಿಂದ ಅಧಿಸೂಚನೆ ಹೊರಡಿಸಿದ ನಂತರ ಸರ್ಕಾರದಿಂದ ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ/ ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗೆ ಅಧಿಸೂಚಿತ ಪ್ರದೇಶಗಳಲ್ಲಿ ಮರಳು ತೆಗೆಯಲು ಜಿಲ್ಲಾ ಮರಳು ಸಮಿತಿಯಿಂದ ಐದು ವರ್ಷ ಕಾಲಾವಧಿ ಅಥವಾ ಮರಳಿನ ಪ್ರಮಾಣ ಮುಕ್ತಾಯವಾಗುವರೆಗೆ ಅಥವಾ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯವರೆಗೆ ಜಿಲ್ಲಾ ಮರಳು ಸಮಿತಿಯಿಂದ ಕಾರ್ಯಾದೇಶ ನೀಡತಕ್ಕದ್ದು.

II) ಅನುಮತಿ ಪಡೆದ ಸರ್ಕಾರಿ ಇಲಾಖೆ/ ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳು, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ (MoEF) ಯಿಂದ ಜಾರಿ ಮಾಡಿರುವ ಸುಸ್ಥಿರ ಮರಳು ಗಣಿಗಾರಿಕೆ ಮಾರ್ಗಸೂಚಿಗಳು, 2016 (Sustainable Sand Mining Guidelines-2016) ರನ್ವಯ ಕಾರ್ಯ ನಿರ್ವಹಿಸುವುದು.

III) ಸರ್ಕಾರಿ ಇಲಾಖೆ/ ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳಿಗೆ ಅಧಿಸೂಚಿಸಿದ ಮರಳು ನಿಕ್ಷೇಪವಿರುವ ಪ್ರದೇಶದಿಂದ ಮರಳನ್ನು ತೆಗೆದು, ನಿಗದಿತ ದಾಸ್ತಾನು ಪ್ರಾಂಗಣಕ್ಕೆ ಸಾಗಿಸಲು ಮತ್ತು ದಾಸ್ತಾನು ಪ್ರಾಂಗಣದಿಂದ ವಾಹನಗಳಿಗೆ ತುಂಬಿಸಲು ಗುತ್ತಿಗೆದಾರರನ್ನು ನಿಯಮಾನುಸಾರ ಆಯ್ಕೆ ಮಾಡುವುದು.

IV) IV, V ಮತ್ತು VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ, ಅಣೆಕಟ್ಟೆ / ಜಲಾಶಯ/ ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ತೆಗೆದಂತಹ ಮರಳನ್ನು ರಾಜ್ಯಾದ್ಯಂತ ಪೂರೈಕೆ ಮಾಡತಕ್ಕದ್ದು.

V) "ಮರಳು ಮಿತ್ರ" ಮೊಬೈಲ್ ಆಪ್ ಮೂಲಕ ಗ್ರಾಹಕರಿಂದ ಆನ್ ಲೈನ್ ನಲ್ಲಿ ಬುಕಿಂಗ್ ಪಡೆದು, ಮರಳು ಸರಬರಾಜು ಮಾಡತಕ್ಕದ್ದು.

VI) ಮರಳು ಸಾಗಾಣಿಕೆಗೆ ವಿತರಿಸುವ ಖನಿಜ ರವಾನೆ ಪರವಾನಿಗೆ ಪ್ರಮಾಣಕ್ಕನುಗುಣವಾಗಿ ಸಾಗಾಣಿಕೆಯಾಗುತ್ತಿರುವುದನ್ನು ಜಿಲ್ಲಾ ಮರಳು ಸಮಿತಿ ಮೇಲ್ವಿಚಾರಣೆಯೊಂದಿಗೆ ಖಚಿತಪಡಿಸಿಕೊಳ್ಳುವುದು.

VII) ಅನಧಿಕೃತವಾಗಿ ಮರಳು ಸಾಗಾಣಿಕೆಯಾಗುತ್ತಿರುವುದು ಕಂಡುಬಂದಲ್ಲಿ ಜಿಲ್ಲಾ ಮರಳು ಸಮಿತಿಯು ನಿಯಮಾನುಸಾರ ಕ್ರಮಕೈಗೊಳ್ಳತಕ್ಕದ್ದು.

VIII) ಸರ್ಕಾರದಿಂದ ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳು, IV, V ಮತ್ತು VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ, ಅಣೆಕಟ್ಟೆ/ ಜಲಾಶಯ / ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಹೂಳು ತೆಗೆಯುವ ಮುಖಾಂತರ ದೊರೆತ ಮರಳನ್ನು ದಾಸ್ತಾನು ಪ್ರಾಂಗಣದಲ್ಲಿ ಸಂಗ್ರಹಿಸತಕ್ಕದ್ದು ಹಾಗೂ ದಾಸ್ತಾನು ಪ್ರಾಂಗಣದಿಂದ ಸಾರ್ವಜನಿಕ / ಸರ್ಕಾರಿ ಕಾಮಗಾರಿಗಳಿಗೆ ಸರ್ಕಾರದಿಂದ ನಿಗದಿಪಡಿಸಿದ ಗರಿಷ್ಠ ಮಾರಾಟ ದರ ಮಿತಿಯೊಳಗೆ ಜಿಲ್ಲಾ ಮರಳು ಸಮಿತಿಯು ನಿಗದಿಪಡಿಸುವ ಮರಳಿನ ದರದಂತೆ ಮರಳು ಮಾರಾಟ ಮಾಡುವುದು.

IX) IV, V ಮತ್ತು VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಹಾಗೂ ಅಣೆಕಟ್ಟೆ/ ಜಲಾಶಯ/ ಬ್ಯಾರೇಜ್ ಗಳಲ್ಲಿ ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಮರಳು ತೆಗೆಯುವ ಕಾರ್ಯವನ್ನು ನಿರ್ವಹಿಸುವ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳು ನಿಯಮಾನುಸಾರ ಮರಳು ತೆಗೆಯುವ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ಸದರಿ ಮರಳು ಸಾಗಾಣಿಕೆ ಮಾಡುವ ಸಂದರ್ಭದಲ್ಲಿ ದುರುಪಯೋಗ ಆಗದಂತೆ ನಿಗಾವಹಿಸುವುದು.

X) IV, V ಮತ್ತು VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಹಾಗೂ ಅಣೆಕಟ್ಟೆ/ ಜಲಾಶಯ/ ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಮರಳು ತೆಗೆಯುವ ಕಾರ್ಯವನ್ನು ನಿರ್ವಹಿಸುವ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳು ಮರಳು ಗಣಿಗಾರಿಕೆಯಿಂದ ಹಾಗೂ ಹೂಳಿನಿಂದ ತೆಗೆಯುವ ಮರಳಿನ ಪ್ರಮಾಣ, ಗ್ರಾಹಕರಿಗೆ ವಿತರಿಸಿದ ಮರಳಿನ ಪ್ರಮಾಣ, ಉಳಿಕೆ ಮರಳಿನ ಪ್ರಮಾಣ ಹಾಗೂ ಮರಳು ಮಾರಾಟದಿಂದ ಸಂಗ್ರಹವಾದ ರಾಜಧನ ಹಾಗೂ ಇತರೆ ಎಲ್ಲಾ ಅನ್ವಯಿಕ ಶುಲ್ಕಗಳ ವಿವರಗಳನ್ನೊಳಗೊಂಡ

ಮಾಹಿತಿಯನ್ನು ಪ್ರತಿ ಮಾಹೆಯಾನ ಸದಸ್ಯ ಕಾರ್ಯದರ್ಶಿ, ಜಿಲ್ಲಾ ಮರಳು ಸಮಿತಿ ರವರಿಗೆ ಸಲ್ಲಿಸುವುದು.

**8) ಬೃಹತ್ ಕಾಮಗಾರಿ ನಿರ್ವಹಿಸುವ ಸರ್ಕಾರಿ ಇಲಾಖೆ/ನಿಗಮ/ಸಂಸ್ಥೆಗಳು ಕಾಮಗಾರಿಗಳಿಗೆ ಅಗತ್ಯವಿರುವ ಮರಳನ್ನು IV, V ಮತ್ತು VIನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಗಣಿಗಾರಿಕೆ ನಡೆಸಲು ಮತ್ತು ಅಣೆಕಟ್ಟು/ಜಲಾಶಯ/ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಮರಳು ತೆಗೆಯುವ ಕುರಿತು.**

I) ಬೃಹತ್ ಕಾಮಗಾರಿ ನಿರ್ವಹಿಸುವ ಇಲಾಖೆ/ನಿಗಮ/ಸಂಸ್ಥೆಗಳು IV, V ಮತ್ತು VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಹಾಗೂ ಅಣೆಕಟ್ಟೆ/ ಜಲಾಶಯ/ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಕಾಮಗಾರಿಗಳಿಗೆ ಅಗತ್ಯವಿರುವ ಮರಳು ಗಣಿಗಾರಿಕೆ / ಮರಳು ತೆಗೆಯುವ ಕಾರ್ಯವನ್ನು ನಿರ್ವಹಿಸತಕ್ಕದ್ದು.

II) ಸರ್ಕಾರಿ ಕಾಮಗಾರಿಗಳಿಗೆ ಮರಳು ನಿಕ್ಷೇಪವಿರುವ ಪ್ರದೇಶಗಳ ಗುರುತಿಸುವಿಕೆ ಮತ್ತು ಅಧಿಸೂಚನೆಯನ್ನು ಕಂಡಿಕೆ 7(I) ಮತ್ತು 7(II)ರ ಮಾರ್ಗಸೂಚಿಯಂತೆ ಕ್ರಮ ವಹಿಸುವುದು ಮತ್ತು ಮರಳು ಗಣಿಗಾರಿಕೆ ಮತ್ತು ವಿಲೇವಾರಿಗೆ 7A(I),(II),(III), (IV) & 7(V) , 7B(I), (II), (III) ರ ಮಾರ್ಗಸೂಚಿಗಳು ಅನ್ವಯಿಸುತ್ತವೆ.

III) ಜಿಲ್ಲಾ ಮರಳು ಸಮಿತಿಯಿಂದ ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳು IV, V ಮತ್ತು VIನೇ ಶ್ರೇಣಿಯ ಹೊಳೆ/ ನದಿಗಳಲ್ಲಿ ಹಾಗೂ ಅಣೆಕಟ್ಟು / ಜಲಾಶಯ / ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಸಂಬಂಧಪಟ್ಟ ಕಾಮಗಾರಿಗಳು ಮುಕ್ತಾಯವಾಗುವ ಅವಧಿವರೆಗೆ ಮರಳು ಗಣಿಗಾರಿಕೆ ನಡೆಸಲು / ತೆಗೆಯಲು ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಗಳು ಕಾರ್ಯಾದೇಶ ನೀಡುವುದು.

IV) ಕಾರ್ಯಾದೇಶ ಪಡೆದ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳು. IV, V ಮತ್ತು VIನೇ ಶ್ರೇಣಿಯ ಹೊಳೆ/ನದಿಗಳಲ್ಲಿ, ಅಣೆಕಟ್ಟು/ಜಲಾಶಯ/ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಹೂಳು ತೆಗೆಯುವ ಮುಖಾಂತರ ದೊರೆತ ಮರಳನ್ನು ಸಾಗಾಣಿಕೆ ಮಾಡಲು ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ಗಣಿ ಮತ್ತು

ಭೂವಿಜ್ಞಾನ ಇಲಾಖೆಗೆ ಪಾವತಿಸಿ ಖನಿಜ ರವಾನೆ ಪರವಾನಿಗೆಯೊಂದಿಗೆ ಮರಳನ್ನು ಕಾಮಗಾರಿ ಸ್ಥಳಕ್ಕೆ ಸಾಗಾಣಿಕೆ ಮಾಡಿಕೊಳುವುದು.

V) ಗಣಿ ಮತ್ತು ಭೂವಿಜ್ಞಾನ ಇಲಾಖೆಯ Integrated Lease Management System ಮೂಲಕ ಮರಳು ಸಾಗಾಣಿಕೆ ಪರವಾನಿಗೆಗಳನ್ನು ಮರಳು ದಾಸ್ತಾನು ಪ್ರಾಂಗಣದಲ್ಲಿ ತೆಗೆದು ಮರಳು ಸಾಗಾಣಿಕೆ ವಾಹನಗಳಿಗೆ ನೀಡತಕ್ಕದ್ದು.

VI) IV, V ಮತ್ತು VI ನೇ ಶ್ರೇಣಿಯ ಹೊಳೆ/ನದಿಗಳಲ್ಲಿ,ಅಣೆಕಟ್ಟು/ಜಲಾಶಯ/ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಹೂಳು ತೆಗೆಯುವ ಪ್ರಕ್ರಿಯೆಯ ಮೇಲ್ವಿಚಾರಣೆ ಹಾಗೂ ಹೂಳು ತೆಗೆಯುವ ಮುಖಾಂತರ ದೊರೆತ ಮರಳು ಸಾಗಾಣಿಕೆ ಸಂದರ್ಭದಲ್ಲಿ ದುರುಪಯೋಗ ಆಗದಂತೆ ಕಾರ್ಯಾದೇಶ ಪಡೆದ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳು ನಿಗಾವಹಿಸುವುದು.

VII) IV, V ಮತ್ತು VIನೇ ಶ್ರೇಣಿಯ ಹೊಳೆ/ನದಿಗಳಲ್ಲಿ ಹಾಗೂ ಅಣೆಕಟ್ಟು/ ಜಲಾಶಯ/ ಬ್ಯಾರೇಜ್ ಗಳಲ್ಲಿ ಹಾಗೂ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರದ ಪ್ರದೇಶಗಳಲ್ಲಿ ಹೂಳು ತೆಗೆಯುವ ಕಾರ್ಯವನ್ನು ನಿರ್ವಹಿಸುವ ಸರ್ಕಾರಿಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿಗಳು ಹೂಳಿನಿಂದ ತೆಗೆಯುವ ಮರಳಿನ ಪ್ರಮಾಣ, ಬಳಕೆ ಮಾಡಿದ ಮರಳಿನ ಪ್ರಮಾಣ, ಉಳಿಕೆ ಮರಳಿನ ಪ್ರಮಾಣ ಹಾಗೂ ಸರ್ಕಾರಕ್ಕೆ ಪಾವತಿಸಿರುವ ರಾಜಧನ ಹಾಗೂ ಇತರೆ ಅನ್ವಯಿಕ ಶುಲ್ಕಗಳ ವಿವರಗಳನ್ನೊಳಗೊಂಡ ಮಾಹಿತಿಯನ್ನು ಪ್ರತಿ ತಿಂಗಳು ಸದಸ್ಯ ಕಾರ್ಯದರ್ಶಿ, ಜಿಲ್ಲಾ ಮರಳು ಸಮಿತಿ ರವರಿಗೆ ಸಲ್ಲಿಸುವುದು.

9) ಹೊಸ ಮರಳು ನೀತಿ-2020 ಜಾರಿಯಾಗುವ ಪೂರ್ವದಲ್ಲಿ ಟೆಂಡರ್ ಕಂ ಹರಾಜು ಮೂಲಕ ಮಂಜೂರಾತಿ ನೀಡಿರುವ ಮರಳು ಗಣಿ ಗುತ್ತಿಗೆ ಪ್ರದೇಶಗಳ ಸ್ಥಿತಿ :-

ಹೊಸ ಮರಳು ನೀತಿ, 2020 ಜಾರಿಯಾಗುವ ಪೂರ್ವದಲ್ಲಿ ಟೆಂಡರ್ ಕಂ ಹರಾಜು ಮೂಲಕ ಮಂಜೂರಾತಿ ನೀಡಿರುವ ಮರಳು ಗಣಿ ಗುತ್ತಿಗೆಗಳ ಅವಧಿಯು, ಸದರಿ ಗುತ್ತಿಗೆ ಅವಧಿ ಮುಕ್ತಾಯವಾಗುವವರೆಗೂ ಮುಂದುವರೆಯುತ್ತವೆ.

**10) ಮರಳು ಮಾರಾಟ ದರ ನಿಗಧಿ ಮತ್ತು ಪರಿಷ್ಕರಣೆ ಕುರಿತು :-**

ಮರಳು ದಾಸ್ತಾನು ಪ್ರಾಂಗಣದಿಂದ ಗ್ರಾಹಕರಿಗೆ ಸರ್ಕಾರವು ನಿಗದಿಪಡಿಸಿದ ಗರಿಷ್ಠ ಮಾರಾಟ ದರದ ಮಿತಿಯೊಳಗೆ ಜಿಲ್ಲಾ ಮರಳು ಸಮಿತಿಯಿಂದ ಮಾರಾಟ ದರವನ್ನು ನಿಗದಿಪಡಿಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಹೆಚ್ಚಿನ ದರವನ್ನು ಗ್ರಾಹರಿಂದ ಪಡೆಯತಕ್ಕದ್ದಲ್ಲ.

**11) ಹೊರ ರಾಜ್ಯಗಳಿಂದ ರಾಜ್ಯಕ್ಕೆ ಬರುವ ಮರಳು ಸಾಗಾಣಿಕೆ ವಾಹನಗಳಿಂದ ನಿಯಂತ್ರಣ ಶುಲ್ಕ ಸಂಗ್ರಹಣೆ ಕುರಿತು :-**

ಹೊರ ರಾಜ್ಯಗಳಿಂದ ಮರಳು ಸಾಗಾಣಿಕೆ ಪರವಾನಿಗೆಯನ್ನು ಹೊಂದಿ ಕರ್ನಾಟಕ ರಾಜ್ಯದೊಳಗೆ ಬರುವ ಗಡಿ ದಾಟಿ ಬರುವ ಮರಳು ಸಾಗಾಣಿಕೆ ವಾಹನಗಳಿಂದ, ಅಂತಹ ವಾಹನಗಳ ಚಲನವಲನಗಳನ್ನು ನಿಯಂತ್ರಿಸಲು ಪ್ರತಿ ಮೆಟ್ರಿಕ್ ಟನ್ ಮರಳಿಗೆ ರೂ.100/-ಗಳ ನಿಯಂತ್ರಣ ಶುಲ್ಕವನ್ನು ಸಂಗ್ರಹಿಸಿ ಸರ್ಕಾರಕ್ಕೆ ಪಾವತಿಸತಕ್ಕದ್ದು. ಈ ಉದ್ದೇಶಕ್ಕಾಗಿ ನೆರೆ ರಾಜ್ಯಗಳಿಂದ ಈ ರಾಜ್ಯಕ್ಕೆ ಹೊಂದಿರುವ ಮುಖ್ಯ ಸಂಪರ್ಕ ರಸ್ತೆಗಳಲ್ಲಿ ತನಿಖಾ ಠಾಣೆ ನಿರ್ಮಿಸುವುದು ಹಾಗೂ ಖನಿಜ ಗಸ್ತು ಪಡೆಗಳಿಂದ ತಪಾಸಣೆ ನಡೆಸಿ, ನಿಯಂತ್ರಣ ಶುಲ್ಕ ವಸೂಲಿ ಮಾಡುವುದು.

**12) ಮರಳು ಸಾಗಾಣಿಕೆ ವಾಹನಗಳು / ಲಾರಿಗಳ ನೋಂದಣಿ :-**

ಮರಳು ಸಾಗಾಣಿಕೆ ಮಾಡಲು ಉದ್ದೇಶಿಸುವ ವಾಹನಗಳ ಮಾಲೀಕರುಗಳು ವಾಹನಗಳ ನೋಂದಣಿಯನ್ನು "ಮರಳು ಮಿತ್ರ" ಮೊಬೈಲ್ ಆಪ್ ತಂತ್ರಾಂಶದಲ್ಲಿ ವಾಹನಗಳ ನೋಂದಣಿ ಪ್ರಮಾಣ ಪತ್ರ, GPS ಹೊಂದಿರುವ ಬಗ್ಗೆ ಪ್ರಮಾಣ ಪತ್ರ ಹಾಗೂ ಜಿಲ್ಲಾ ಮರಳು ಸಮಿತಿಯಿಂದ ನಿರ್ದಿಷ್ಟಪಡಿಸಿದ ಇತರೆ ದಾಖಲೆಗಳನ್ನು ಆನ್ ಲೈನ್ ಮೂಲಕ ಅಪ್ ಲೋಡ್ ಮಾಡಿ, ಮರಳು ಸಾಗಾಣಿಕೆ ವಾಹನಗಳ ನೋಂದಣಿ ಮಾಡಿಕೊಳ್ಳತಕ್ಕದ್ದು.

**13) ಮರಳು ಸಂಗ್ರಹಣೆ ನಿಷೇಧ :-**

ಮರಳು ಗಣಿಗಾರಿಕೆ / ಮರಳು ತೆಗೆಯಲು ಅನುಮತಿ ಪಡೆದ ಗ್ರಾಮ ಪಂಚಾಯತಿಗಳು ಮತ್ತು ಸರ್ಕಾರಿ ಇಲಾಖೆ /ಸರ್ಕಾರದಿಂದ ಮರಳು ತೆಗೆಯಲು ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಸ್ವಾಮ್ಯದ ನಿಗಮ / ಮಂಡಳಿ ಅಥವಾ ಮರಳು ಗಣಿ ಗುತ್ತಿಗೆ / ಲೈಸೆನ್ಸ್ ದಾರರನ್ನು ಹೊರತುಪಡಿಸಿ ಇತರೆ ಯಾವುದೇ ವ್ಯಕ್ತಿ / ಸಂಸ್ಥೆಗಳು ಮರಳು ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಮಾಡುವಂತಿಲ್ಲ.

**14) ಮರಳು ಸಾಗಾಣಿಕೆ:-**

I) ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 42 ರಂತೆ, ಸರ್ಕಾರದಿಂದ ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ / ಸರ್ಕಾರಿ ಸ್ವಾಮ್ಯದ ನಿಗಮ /

ಮಂಡಳಿಗಳು/ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳು ಗಣಕೀಕೃತ ಖನಿಜ ರವಾನೆ ಪರವಾನಿಗೆಯೊಂದಿಗೆ ಮರಳನ್ನು ಸಾಗಾಣಿಕೆ ಮಾಡತಕ್ಕದ್ದು.

II) ಮರಳು ಸಾಗಾಣಿಕೆ ಮಾಡುವ ವಾಹನಗಳು ಜಿ.ಪಿ.ಎಸ್ ಅಳವಡಿಸಿಕೊಂಡು ಖನಿಜ ರವಾನೆ ಪರವಾನಿಗೆಯಲ್ಲಿ ನಿಗದಿಪಡಿಸಿದ ಮಾರ್ಗದಲ್ಲಿಯೇ ಸಂಚರಿಸತಕ್ಕದ್ದು.

15) ದಂಡನೆ:

I) ಅನಧಿಕೃತ ಮರಳು ಗಣಿಗಾರಿಕೆ, ಮರಳು ಸಾಗಾಣಿಕೆ ಸರ್ಕಾರವು ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ಸಾಗಾಣಿಕೆ ವೆಚ್ಚವನ್ನು ವಸೂಲು ಮಾಡುವುದು, ಜಿ.ಪಿ.ಎಸ್ ಉಪಕರಣ ಅಳವಡಿಸದೇ ಮರಳು ಸಾಗಾಣಿಕೆ, ನಿಷೇಧಿಸಿದ ಯಂತ್ರೋಪಕರಣಗಳನ್ನು ಉಪಯೋಗಿಸಿ ಮರಳು ಗಣಿಗಾರಿಕೆ ನಡೆಸಿರುವುದು ಕಂಡುಬಂದಲ್ಲಿ ಕರ್ನಾಟಕ ಉಪ ಖನಿಜ ರಿಯಾಯಿಯಿ ನಿಯಮಗಳು, 1994ರ ನಿಯಮ 54ರಡಿ ಅಧಿಕಾರ ಹೊಂದಿದ ಸಕ್ಷಮ ಅಧಿಕಾರಿಯು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 43 ಮತ್ತು ನಿಯಮ 44 ರನ್ವಯ ಕ್ರಮವಹಿಸುವುದು.

II) ಮರಳು ಸಾಗಾಣಿಕೆ ವಾಹನಗಳು ಖನಿಜ ಸಾಗಾಣಿಕೆ ಪರವಾನಿಗೆಯಲ್ಲಿ ನಿಗದಿಪಡಿಸಿರುವ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಮರಳು ಸಾಗಾಣಿಕೆ ಮಾಡುತ್ತಿರುವುದು ಕಂಡು ಬಂದಲ್ಲಿ ಪ್ರತಿ ಮೆಟ್ರಿಕ್ ಟನ್ ಹೆಚ್ಚುವರಿ ಮರಳಿನ ಪ್ರಮಾಣಕ್ಕೆ ರೂ.3000/-ಗಳ ದಂಡವನ್ನು ವಿಧಿಸತಕ್ಕದ್ದು.

III) ಮರಳು ದಾಸ್ತಾನು ಕೇಂದ್ರದಿಂದ ಜಿ.ಪಿ.ಎಸ್ ಉಪಕರಣ ಅಳವಡಿಸದ ವಾಹನಗಳಿಂದ ಮರಳು ಸಾಗಾಣಿಕೆ ಮಾಡುವಂತಿಲ್ಲ. ಒಂದು ವೇಳೆ ಜಿ.ಪಿ.ಎಸ್ ಅಳವಡಿಸದೇ ಮರಳು ಸಾಗಾಣಿಕೆ ಮಾಡಿದ್ದು ಕಂಡುಬಂದಲ್ಲಿ ಸದರಿ ಮರಳು ಸಾಗಾಣಿಕೆಯನ್ನು ಅನಧಿಕೃತವೆಂದು ಪರಿಗಣಿಸಿ, ಪ್ರತಿ ವಾಹನಕ್ಕೆ ರೂ.10,000/- ದಂಡವನ್ನು ವಿಧಿಸತಕ್ಕದ್ದು. ಆದರೆ ಸದರಿ ನಿಬಂಧನೆಗಳು, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ I, II ಮತ್ತು III ಶ್ರೇಣಿಯ ಹಳ್ಳ / ತೊರೆ / ಕೆರೆಗಳಿಂದ ಮರಳು ಸಾಗಾಣಿಕೆ ಮಾಡುವ ಲಘು ವಾಹನಗಳಿಗೆ ಅನ್ವಯಿಸುವುದಿಲ್ಲ.

IV) ಒಂದೇ ಮರಳು ಸಾಗಾಣಿಕೆ ಪರವಾನಗಿಯನ್ನು ಪಡೆದು, ಹಲವು ಬಾರಿ ಮರಳನ್ನು ಸಾಗಾಣಿಕೆ ಮಾಡಿರುವುದು ದೃಢಪಟ್ಟಲ್ಲಿ, ಸದರಿ ಮರಳು ಸಾಗಾಣಿಕೆಯನ್ನು ಅನಧಿಕೃತವೆಂದು ಪರಿಗಣಿಸಿ, ಪ್ರತಿ ಟ್ರಿಪ್ ಮರಳು ಸಾಗಾಣಿಕೆಗೆ ನಿಯಮ 43 ರನ್ವಯ ಕ್ರಮವಹಿಸತಕ್ಕದ್ದು.

16) ಅನಧಿಕೃತ ಮರಳು ದಾಸ್ತಾನು/ಸಂಗ್ರಹಣೆ ವಿಲೇವಾರಿ ಕ್ರಮ:

ಅನಧಿಕೃತವಾಗಿ ಮರಳು ದಾಸ್ತಾನು/ಸಂಗ್ರಹಣೆ ಮಾಡಿರುವುದು ಕಂಡು ಬಂದಲ್ಲಿ, ಅದನ್ನು ಜಿಲ್ಲಾ ಅಥವಾ ತಾಲ್ಲೂಕು ಮರಳು ಸಮಿತಿಯ ಯಾವುದೇ ಸದಸ್ಯರು, ಮಹಜರು ಮೂಲಕ ವಶಪಡಿಸಿಕೊಂಡ ಮರಳನ್ನು ಲೋಕೋಪಯೊಗಿ ಇಲಾಖೆಗೆ ಹಸ್ತಾಂತರಿಸತಕ್ಕದ್ದು ಮತ್ತು ಸದರಿ ಮರಳನ್ನು ಲೋಕೋಪಯೋಗಿ ಇಲಾಖೆಯಿಂದ, ಕೇಂದ್ರ ಅಥವಾ ರಾಜ್ಯ ಸರ್ಕಾರದ ಯೋಜನೆ ಅಥವಾ ಕಡಿಮೆ ವೆಚ್ಚದ ವಸತಿ ಯೋಜನೆಗಳಿಗೆ, ಜಿಲ್ಲಾ ಮರಳು ಸಮಿತಿಯು ನಿರ್ಧರಿಸಿದ ಮಾರಾಟ ದರದಲ್ಲಿ ಸಂಬಂಧಪಟ್ಟ ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಗಣಕೀಕೃತ ಖನಿಜ ರವಾನೆ ಪರವಾನಿಯೊಂದಿಗೆ ವಿಲೇವಾರಿ ಮಾಡತಕ್ಕದ್ದು.

17). ಮೇಲ್ಮನವಿ ಮತ್ತು ಪರಿಷ್ಕರಣೆ:

I, II, III, IV, V & VI ಶ್ರೇಣಿಯ ಹಳ್ಳ/ಹೊಳೆ/ನದಿ ಮತ್ತು ಅಣೆಕಟ್ಟು/ಜಲಾಶಯ ಮತ್ತು ಅಣೆಕಟ್ಟು /ಜಲಾಶಯದ ಹಿನ್ನೀರನ ಪ್ರದೇಶಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಮರಳು ಸಮಿತಿಯ ಆದೇಶದಿಂದ ಬಾಧಿತನಾದ ಯಾವುದೇ ವ್ಯಕ್ತಿಯು, ಆದೇಶವು ಸ್ವೀಕೃತಗೊಂಡ 30 ದಿನದೊಳಗೆ ಅಂತಹ ಆದೇಶದ ಪರಿಷ್ಕರಣೆಗಾಗಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರಲ್ಲಿ ಪರಿಷ್ಕರಣೆಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

18). ತೊಂದರೆಗಳ ನಿವಾರಣೆ:

ಹೊಸ ಮರಳು ನೀತಿ, 2020 ಜಾರಿ ಸಂದರ್ಭದಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು ಸದರಿ ತೊಂದರೆ ನಿವಾರಿಸಲು ಅಗತ್ಯ ಸ್ಪಷ್ಟೀಕರಣವನ್ನು ನೀಡುವ ಅಧಿಕಾರವನ್ನು ಹೊಂದಿರುತ್ತದೆ.

*****

04:12:204

ಡಾ:ಸಿ.ವಿ. ರಾಮೇಶ್
ಜಂಟಿ ನಿರ್ದೇಶಕರು (ಖನಿಜ),
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ನಂ:49, "ಖನಿಜ ಭವನ", ಬೆಂಗಳೂರು-01